ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜೂನ್ 2020

ಬೆಲೆ ರೂ. 1



## ಕಲಾವಿದನ ಕಣ್ಣಲ್ಲಿ ಕಂಡ 'ಅಂತರ'




ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ದಿ. ಜಿ.ವೈ. ಕೃಷ್ಣನ್‌ರವರು ಸಂಘದ ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಿರುವುದು. ಕೃಷ್ಣನ್ ಅವರು ಲೋಕಸಭಾ ಸದಸ್ಯರಾಗಿ ಕೋಲಾರ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. (ಚಿತ್ರ : ವರ್ಷ 1983–86)



ಕನ್ನಡದ ಖ್ಯಾತ ವಿಮರ್ಶಕ ದಿ. ಡಿ.ಆರ್. ನಾಗರಾಜ್, ಕವಿ ಡಾ. ಬಿ.ಸಿ. ರಾಮಚಂದ್ರ ಶರ್ಮ, ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ದಿ. ಎನ್.ಪಿ. ಭಟ್ ಮತ್ತು ಅಂದಿನ ಪ್ರಧಾನ ಕಾರ್ಯದರ್ಶಿ ಸಿ.ವಿ. ಗೋಪಿನಾಥ್ (ವರ್ಷ 1990–92)


**DELHI KARNATAKA SANGHA** Rao Tularam Marg, Sector-12, R K Puram, New Delhi-110022.
Phone: 011-26109615. 011-26104818 email:dksangha@gmail.com

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪಾದಕ ಮಂಡಳ ಸದಸ್ಯರು
ಚಂದ್ರಶೇಖರ ಜೋಳದರಾಶಿ
ಎಸ್. ಕುಮಾರ್
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

ಮುಖಪುಟ ಚಿತ್ರ ಕೃಪೆ
ಆನಂದ ಮುರಗೋಡ

ಸಂಪುಟ 30 । ಸಂಚಿಕೆ 9
ಜೂನ್ 2020

# ಸಂಪಾದಕೀಯ

## ಪ್ರತಿಕೂಲ ಪರಿಸ್ಥಿತಿಯಲ್ಲಿ ಸೃಜನಶೀಲತೆ

ತನ್ನ ಬದುಕಿನ ಉದ್ದೇಶವೇನು ಎಂಬ ಪ್ರಶ್ನೆ ಪ್ರತಿಯೊಬ್ಬರಲ್ಲಿ ಒಂದಲ್ಲ ಒಂದು ದಿನ ಎದುರಾಗಿರಬಹುದು. ಬುದ್ಧಿ ಬಲಿತ ಮೇಲೆ ಮನುಷ್ಯ ತನ್ನ ಜೀವನಕ್ಕೆ ಒಂದು ಗುರಿಯನ್ನು ಹಾಕಿಕೊಂಡಿರುತ್ತಾನೆ. ಬದುಕುವ ಉದ್ದೇಶಗಳು ಭಿನ್ನ ಬಗೆಯದು. ಕೆಲವರಿಗೆ ಹಣವನ್ನು ಕೂಡಿ ಹಾಕಿ ಶ್ರೀಮಂತನಾಗುವುದು, ಇನ್ನು ಕೆಲವರಿಗೆ ಉನ್ನತ ಸ್ಥಾನಮಾನ ಹೊಂದುವುದು, ಇತ್ಯಾದಿ. ಲೌಕಿಕ ಸುಖಭೋಗಗಳಲ್ಲಿ ನಿರತರಾದವರಿಗೆ ಕೊರೋನಾ ಎಂಬ ಪುಟ್ಟ ಅಣುವೊಂದು ಆತಂಕ ತಂದಿರಬಹುದು. ಮುಂದೇನು? ಎಂಬ ಪ್ರಶ್ನೆ ಕಾಡಿರಬಹುದು. ಏಕೆಂದರೆ ಈ ಭಯಾನಕ ವೈರಾಣು ಪ್ರತ್ಯೇಕವಾಗಿ ವ್ಯಕ್ತಿ ಯಾರು ಎಂಬ ಗೊಡವೆಗೆ ಹೋಗಲಾರದು.

ಈ ಎಲ್ಲ ಆತಂಕಗಳ ನಡುವೆ ತಮ್ಮ ಬದುಕನ್ನು ಸಹ್ಯವಾಗಿಸುವವರು ಸಾಹಿತಿ ಮತ್ತು ಕಲಾವಿದರು. ಕರೋನಾ ಸಂಕಷ್ಟದ ಪ್ರತಿಕೂಲ ಸಂದರ್ಭದಲ್ಲೂ ಇವರು ತಮ್ಮ ಸೃಜನಶೀಲತೆಯನ್ನು ಉಳಿಸಿಕೊಂಡೇ ಬಂದಿದ್ದಾರೆ. ಇವರ ಜೀವನೋತ್ಸಾಹ ಶ್ಲಾಘನೀಯ. ಇದಕ್ಕೆ ಅನೇಕ ನಿದರ್ಶನಗಳನ್ನು ನೀಡಬಹುದು.

ದೆಹಲಿಯಲ್ಲಿರುವ ಪ್ರಮುಖ ಸಾಹಿತಿಗಳಾದ ಡಾ. ಎಚ್.ಎಸ್. ಶಿವಪ್ರಕಾಶ್, ಡಾ. ಪುರುಷೋತ್ತಮ ಬಿಳಿಮಲೆ, ಡಾ. ಟಿ.ಎಸ್. ಸತ್ಯನಾಥ್ ಮೊದಲಾದವರು ಸಾಮಾಜಿಕ ಜಾಲತಾಣಗಳಲ್ಲಿ ವಿಚಾರಗಳನ್ನು ಹಂಚಿಕೊಳ್ಳುತ್ತಿದ್ದಾರೆ. ತಮ್ಮದೇ ಕವಿತೆಗಳಲ್ಲದೆ ಜರ್ಮನ್, ಫ್ರೆಂಚ್, ಉರ್ದು, ಮಲಯಾಳಂ ಇತ್ಯಾದಿ ಭಾಷೆಗಳ ಅಪೂರ್ವ ಕವಿತೆಗಳನ್ನು ಶಿವಪ್ರಕಾಶ್ ಪರಿಚಯಿಸುತ್ತಾ ಬಂದಿದ್ದಾರೆ. ವಚನ ಸಾಹಿತ್ಯ ಸಿರಿಯನ್ನು ನಿರಂತರ ನೀಡುತ್ತಿದ್ದಾರೆ.

ಸರಕಾರ ವಿಧಿಸಿದ ದಿಗ್ಬಂಧನದ ಸಮಯದಲ್ಲಿ ಶಿವಪ್ರಕಾಶ್ ಕಾವ್ಯದ ಮೂಲಕ ಪ್ರತಿಕ್ರಿಯಿಸುತ್ತಾರೆ. ಅದರ ಆರಂಭದ ಸಾಲುಗಳು ಇಂತಿವೆ.

ನಿನ್ನ ನಾನು ಮುಟ್ಟಬೇಕು
ಮೈಯ ಸೋಕದೆ
ಕೈಯಿಂದ ಸೋಕದೆ
ನಿನ್ನ ಅವನ ಇವಳ ಅವಳ
ಮುಟ್ಟಬೇಕು
ಕೈಯಿಂದ ಸೋಕದೆ
ಮೈಯ ಸೋಕದೆ

ಶಾರೀರಿಕ ಸ್ಪರ್ಶವನ್ನು ಮೀರಿದ ಉನ್ನತ ಮಾನವ ಸಂಬಂಧಗಳ ಬಗೆಗೆ ಅವರು ಬರೆದ ಈ ಕವಿತೆ ಅಪಾರ ಮೆಚ್ಚುಗೆ ಮತ್ತು ಪ್ರತಿಕ್ರಿಯೆಗಳನ್ನು ಪಡೆದಿದೆ.

ಲೇಖಕರಿಗೆ ತನ್ನ ಬರಹಗಳು ಮುದ್ರಣಗೊಂಡಾಗಲೇ ಸಾರ್ಥಕ ಭಾವ ಮೂಡುತ್ತದೆ. ಮುದ್ರಣ ಕಛೇರಿಗಳು ಮತ್ತೆ ತೆರೆದಿರುವುದು ಸಂತೋಷ ತಂದಿದೆ. ಕೊರೋನಾ ಪ್ರತಿಕೂಲ ಸಮಯದಲ್ಲಿ ಡಾ. ಪುರುಷೋತ್ತಮ ಬಿಳಿಮಲೆ ತಮ್ಮ ಆತ್ಮಕತೆಯ ಬರವಣಿಗೆಯನ್ನು ಮುಂದುವರಿಸಿದ್ದಾರೆ. ಸದ್ಯದಲ್ಲೇ ಪ್ರಕಟಿಸುವುದಾಗಿ ತಿಳಿಸಿದ್ದಾರೆ. ಬದುಕಿನ ಸ್ವಾರಸ್ಯಕರ ಪ್ರಸಂಗಗಳ ವಿಚಾರಪೂರ್ಣ ಕೃತಿಯನ್ನು ಓದುಗರು ಬಿಳಿಮಲೆಯವರಿಂದ ನಿರೀಕ್ಷಿಸುತ್ತಿದ್ದಾರೆ.

ರಂಗ ನಿರ್ದೇಶಕ ಶಿವಾನಂದ ಇಂಗಳೇಶ್ವರ ಅವರು ಸಂಚಾಲಕರಾಗಿರುವ 'ದಿನಕರ' ತಂಡದ ಕಲಾವಿದರು ಆ್ಯಪ್ ಮೂಲಕ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುತ್ತಿದ್ದಾರೆ. ಇದೇ ರೀತಿ ಬೆಂಗಳೂರಿನಲ್ಲಿರುವ ಕಲಾವಿದ ಟಿ.ಎಸ್. ರಮೇಶ್ ಅವರ ಮಾರ್ಗದರ್ಶನದಲ್ಲಿ 'ವರ್ಷಗಾನ' ಎಂಬ ಕಾರ್ಯಕ್ರಮವನ್ನು ದೆಹಲಿಯ ಗಾಯಕರು ನೀಡಿದ್ದಾರೆ. ನೃತ್ಯ ಕಲಾವಿದೆ ಸಪ್ನಾ ಅತ್ತಾವರ್ ಅವರ ನಾಟ್ಯ, ಶ್ರೀಕಾಂತ್ ಜಿ. ಪೊದ್ದಾರ್ ಮತ್ತು ಜ್ಯೋತಿ ಪೊದ್ದಾರ್ ಅವರ ಚಿತ್ರಕಲೆಗಳೂ ಕಾಣಿಸಿಕೊಂಡು ಮುದ ನೀಡಿವೆ. ಇವೆಲ್ಲವೂ ಪ್ರತಿಕೂಲ ಕಾಲದಲ್ಲಿ ಕಂಡ ಸೃಜನಶೀಲತೆ.

ನಮ್ಮ ನಡುವಿನ ಖ್ಯಾತ ಛಾಯಾಚಿತ್ರಗ್ರಾಹಕ ಆನಂದ ಮುರಗೋಡ್ ಅವರು ಕೋವಿಡ್-19ರ ಹಿನ್ನೆಲೆಯಲ್ಲಿ ತಮ್ಮ ಅಪೂರ್ವ ಛಾಯಾಚಿತ್ರವನ್ನು 'ಅಭಿಮತ'ಕ್ಕೆ ನೀಡಿದ್ದಾರೆ. 'ಸಾಮಾಜಿಕ ಅಂತರ'ವನ್ನು ಬಿಂಬಿಸುವ ಈ ಚಿತ್ರವನ್ನು ಆನಂದ್ ಒರಿಸ್ಸಾ ರಾಜ್ಯದ ಚಿಲಿಕಾ ಸರೋವರದಲ್ಲಿ ಸೆರೆ ಹಿಡಿದಿದ್ದಾರೆ. ಇದು ಯುನೆಸ್ಕೊ ವಿಶ್ವ ಪರಂಪರೆಯಾಗಿಯೂ ಗುರುತಿಸಿಕೊಂಡಿದೆ. ಆನಂದ ಮುರಗೋಡ್ ಅವರ ಪ್ರತಿಭೆಗೆ ಅಭಿನಂದನೆಗಳು ಮತ್ತು ನಮ್ಮ ಹಾರ್ದಿಕ ಧನ್ಯವಾದಗಳು.

ಡಾ. ಅವನೀಂದ್ರನಾಥ್ ರಾವ್

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 30 ಸಂಚಿಕೆ 9
ಜೂನ್ 2020, ಬೆಲೆ ರೂ. 1

## ನಮ್ಮನಮ್ಮೊಳಗೆ

# ದೆಹಲಿ ಕನ್ನಡಿಗರು ಮತ್ತು ಕೊರೊನಾ ದಿನಗಳು

ದೆಹಲಿಯಲ್ಲಿ ಕೊರೊನಾದ ಹಾವಳಿ ನಿಧಾನವಾಗಿ ಹೆಚ್ಚುತ್ತಿದೆ. ಮೂವತ್ತು ಸಾವಿರದತ್ತ ಅದು ದೌಡಾಯಿಸುತ್ತಿದೆ. ದೆಹಲಿ ಸರಕಾರ ನೀಡಿದ ವಿವರಗಳ ಪ್ರಕಾರ ಈ ಕೊರೊನಾದ ಓಟವನ್ನು ನಿಯಂತ್ರಿಸಲು ಮೊನ್ನೆಯವರೆಗೆ ಸುಮಾರು 200 ಬಂಧಿತ ಕ್ಷೇತ್ರಗಳನ್ನು ಗುರುತಿಸಲಾಗಿತ್ತು. ಈಗ ಅದು ಸುಮಾರು 158 ಕ್ಕೆ ಇಳಿದಿದೆ. ಆದರೂ ಈ ಬಂಧಿತ ಕ್ಷೇತ್ರಗಳ ಏರಿಳಿತ ಇನ್ನೂ ನಡೆಯುತ್ತಿದೆ. ದೆಹಲಿಯ ಮಧ್ಯ, ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಭಾಗದ ಹಲವಾರು ಪ್ರದೇಶಗಳು ಈ ಬಂಧಿತ ಕ್ಷೇತ್ರಗಳನ್ನು ಹೊಂದಿವೆ. ಹೊಸ ಕೇಸುಗಳು ನೂತನ ಜಾಗೆಗಳಲ್ಲಿ ಗುರುತಿಸಲ್ಪಟ್ಟ ಹಾಗೆ ಅವುಗಳನ್ನು ಕೊರೊನಾ ಬಂಧಿತ ಪ್ರದೇಶವನ್ನಾಗಿ ಘೋಷಿಸಲಾಗುತ್ತಿದೆ. ಇದರಿಂದಾಗಿ ನಮ್ಮೆಲ್ಲರ ದಿನನಿತ್ಯದ ಬದುಕೆ ಬದಲಾಗಿ ಹೋಗಿದೆ. ಈಗ ಮನೆಯೊಳಕ್ಕೆ ನಾವೆಲ್ಲ ಬಂಧಿಗಳಾಗಿ ಅರವತ್ತು ದಿನಗಳನ್ನು ಮುಗಿಸಿ ತೊಂಬತ್ತರ ಬಳಿ ಸಾಗುತ್ತಿದ್ದೇವೆ. ಮುಂದೆಯೂ ನಮ್ಮ ಈ ಬದುಕು ಅನಿಶ್ಚಿತ ಕಾಲಗರ್ಭದ ಭಾಗವಾಗಿ ಬಿಟ್ಟಿದೆ. ಈ ಕೊರೊನಾದ ನರ್ತನ ಇನ್ನು ಎಷ್ಟು ಕಾಲ ನಡೆದಿತು ಎಂಬುದನ್ನು ಕರಾರುವಕ್ಕಾಗಿ ಯಾರೂ ಹೇಳುವಂತಿಲ್ಲ. ಸರಕಾರವಂತೂ ಇನ್ನು ನಾವೆಲ್ಲ ಈ ಕೊರೊನಾದೊಂದಿಗೆ ಜೀವನ ಮಾಡುವ ಪರಿಯನ್ನು ನಮ್ಮದಾಗಿಸಿಕೊಳ್ಳಬೇಕು ಎಂಬ ಮಾತನ್ನು ಸಾರಲು ಪ್ರಾರಂಭಸಿದೆ. ಮೊದಲು ಲಾಕ್‌ಡೌನ್ ಎಂದೆವು. ಈಗ ಅನ್ ಲಾಕ್‌ಡೌನ್ ಎನ್ನುತ್ತಿದ್ದೇವೆ. ಈಗ ಇವೆಲ್ಲದರ ನಡುವೆ ಸುಮಾರು ಏಳು ಸಾವಿರ ಜನ ಕೊರೊನಾದೊಂದಿಗೆ ಹೊರಾಡಿ ತಮ್ಮ ಜೀವ ತೆತ್ತಿದ್ದರೆ, ಸುಮಾರು ಒಂದು ಲಕ್ಷಕ್ಕೂ ಮೀರಿ ಅದನ್ನು ಜಯಿಸಿ ಬಂದವರೂ ಇದ್ದಾರೆ. ನಾವೆಲ್ಲ ಈ ಕೊರೊನಾ ನಮ್ಮನ್ನು ತಟ್ಟದಿದ್ದರೆ ಸಾಕಪ್ಪ ಎಂಬ ಜಾಗರೂಕತೆಯಲ್ಲಿ ನಾವೆಲ್ಲ ಇದ್ದೇವೆ. ದೇಶದಾದ್ಯಂತ ಲಕ್ಷಾಂತರ ವಲಸೆ ಕಾರ್ಮಿಕರು ಇನ್ನೂ ತಮ್ಮ ತಮ್ಮ ಮನೆಯೆಂಬ ಗೂಡುಗಳನ್ನು ಸೇರಿಕೊಳ್ಳಲು ಶತಯುಗತಾಯು ಪ್ರಯತ್ನ ನಡೆಸಿದ್ದಾರೆ. ಕುಗ್ಗುತ್ತಿರುವ ದೇಶದ ಆರ್ಥಿಕ ಬಲಕ್ಕೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ವಿಧವಿಧವಾದ ಆಸರೆಯನ್ನು ನೀಡುವ ಪ್ರಯತ್ನ ಮಾಡುತ್ತಿವೆ.

ನಾವೆಲ್ಲ ದೆಹಲಿಯಲ್ಲಿರುವ ಕನ್ನಡಿಗರು ಈ ಎಲ್ಲ ಬೆಳವಣಿಗೆಗಳ ಭಾಗವಾಗಿ ನಮ್ಮ ಬದುಕನ್ನು ಸಾಗಿಸುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ದೆಹಲಿಯ ಹೊರತಾಗಿ, ಅದರ ಆಸುಪಾಸಿನ (ವಿಸ್ತ್ರತ ದೆಹಲಿ ರಾಜಧಾನಿ ಪ್ರದೇಶ) ಶಹರಗಳಾದ ನೊಯಿಡಾ, ಗುರುಗಾಂವ್, ಫರಿದಾಬಾದ ಮತ್ತು ಗಾಜಿಯಾಬಾದನಂತಹ ಜಾಗೆಗಳಿಂದಲೂ ಕೊರೊನಾ ನಿಧಾನವಾಗಿ ತನ್ನ ಬಲೆಯನ್ನು ಬೀಸುತ್ತಿರುವ ಸುದ್ದಿಗಳು ಬರುತ್ತಿವೆ. ಅಲ್ಲಿರುವ ಕನ್ನಡಿಗರೆಲ್ಲರೂ ಸಹ ಇದೇ ರೀತಿಯ ಸಂದರ್ಭದಲ್ಲಿ ತಮ್ಮ ಬದುಕನ್ನು ಸಾಗಿಸುತ್ತಿದ್ದಾರೆ. ಆದರೂ ಅಲ್ಲಿನ ಸರಕಾರಗಳು (ಉತ್ತರ ಪ್ರದೇಶ ಮತ್ತು ಹರಿಯಾಣ) ಕಾಲಕಾಲಕ್ಕೂ ಘೋಷಿಸುತ್ತಿರುವ ಓಡಾಟದ ನಿರ್ಭಂಧಗಳಿಂದಾಗಿ ಹಲವಾರು ಅಡಚಣೆಗಳಿವೆ. ದೆಹಲಿಯಲ್ಲಿ ವಾಸವಾಗಿರುವ ಲಕ್ಷಾಂತರ ಜನ ವಿಸ್ತ್ರತ ರಾಜಧಾನಿ ಪ್ರದೇಶಗಳಾದ ಗುರುಗಾಂವ್, ನೊಯಿಡಾ, ಫರಿದಾಬಾದ ಮತ್ತು ಇತರ ಜಾಗೆಗಳಲ್ಲಿ ಕೆಲಸ ಮಾಡುತ್ತಿದ್ದರೆ, ಅಷ್ಟೇ ಜನ ಈ ಎಲ್ಲ ಜಾಗೆಗಳಲ್ಲಿ ನೆಲೆಸಿ ದೆಹಲಿಯಲ್ಲಿ ವಿವಿಧ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಈ ವಿಸ್ತ್ರತ ದೆಹಲಿಯ ರಾಜಧಾನಿಯ ಭಾಗಗಳಲ್ಲಿ ವಾಸುಸಿತ್ತಿರುವವರಿಗೆ ದೆಹಲಿಯತ್ತ ಬರಲು ಮತ್ತು ಹೋಗಲು ಅಸಾಧ್ಯವಾಗಿ ಹೋಗಿದೆ. ಹರಿಯಾಣ ಮತ್ತು ಉತ್ತರ ಪ್ರದೇಶ ಸರಕಾರಗಳು ಕೊರೊನಾದ ಹಬ್ಬುವಿಕೆಯನ್ನು ನಿಯಂತ್ರಿಸಲು ದೆಹಲಿಯೊಂದಿಗಿನ ತಮ್ಮ ಗಡಿಗಳನ್ನು ಬಿಗುವಾಗಿ ಮುಚ್ಚುವ ನಿರ್ಧಾರವನ್ನು ಕಾಲಕಾಲಕ್ಕೂ ತೆಗೆದುಕೊಳ್ಳುತ್ತಿವೆ. ಹೀಗಾಗಿ ದೆಹಲಿಯ ನೆರೆಹೊರೆಯವರು ಸುಗಮವಾಗಿ ದೆಹಲಿಗೆ ಹೆಜ್ಜೆ ಇರಿಸುವುದು ಅಸಾಧ್ಯವಾಗಿ ಹೋಗಿದೆ.

ಇನ್ನೂ ನಾಲ್ಕಾರು ತಿಂಗಳು ದೆಹಲಿಯ ಕರ್ನಾಟಕ ಸಂಘದ ಸದಸ್ಯರು ಸಂಘದ ಆವರಣದಲ್ಲಿ ಸೇರಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಬಹುಶಃ ಅಸಾಧ್ಯವೆಂದೇ ತೋರುತ್ತಿದೆ. ದೆಹಲಿ ಸರಕಾರದ ನಿಯುಕ್ತಿಯ ಪ್ರಕಾರ ಯಾವುದೇ ಸಭೆ ಸಮಾರಂಭಗಳನ್ನು ಆಯೋಜಿಸುವಂತಿಲ್ಲ. ಸಂಘದ ದೈನಂದಿನ ಚಟುವಟಿಕೆಗಳು ಮಾತ್ರ ಕೆಲ ಸಂಘದ ಸಿಬ್ಬಂದಿಗಳೊಂದಿಗೆ ನಡೆಯುತ್ತಿವೆ. ಇಂತಹ ಸಂದರ್ಭದಲ್ಲಿ ಸಂಘದ ಕಾರ್ಯಕ್ರಮಗಳನ್ನು ಮತ್ತು ಆಡಳಿತಾತ್ಮಕ ಎಲ್ಲ ಸಭೆಗಳನ್ನು ವೆಬ್‌ನಾರ್ ಮೂಲಕವೇ ಮಾಡಬೇಕಾಗಿದೆ. ನಾವೆಲ್ಲ ಡಿಜಿಟಲ್ ತಂತ್ರಜ್ಞಾನದ ಹೊಸಬಗೆಯ ಈ ಅವಿಷ್ಕಾರಗಳನ್ನು ನಮ್ಮ ಮುಂದಿನ ಕಾರ್ಯಕ್ರಮಗಳ ಆಯೋಜನೆಯಲ್ಲಿ ಅಳವಡಿಸಿಕೊಳ್ಳಬೇಕಾಗಿದೆ. ಈಗಾಗಲೇ ಸಂಘದ ಸದಸ್ಯರು ಈ ಬಗೆಯ ವೆಬ್‌ನಾರ್ ಕಾರ್ಯಕ್ರಮಗಳನ್ನು ರೂಪಿಸಿ ಸಾದರ ಪಡಿಸುತ್ತಿದ್ದಾರೆ.

ಸರಕಾರವು ಸಹ ಈ ನಿಟ್ಟಿನಲ್ಲಿ ತನ್ನ ಹೆಜ್ಜೆಯನ್ನಿರಿಸಿದೆ. ಕೆಲ ದಿನಗಳ ಹಿಂದೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ವೆಬ್‌ನಾರ್ ಮೂಲಕ ಹೊರನಾಡ ಕನ್ನಡಿಗರೆಲ್ಲರ ಸಮಾವೇಶವೊಂದನ್ನು ಆಯೋಜಿಸಿತ್ತು. ಇದರಲ್ಲಿ ದೇಶದ ವಿವಿಧ ಭಾಗಗಳ ಕನ್ನಡ ಸಂಘಟನೆಗಳು ಭಾಗವಹಿಸದ್ದವು. ವಿದೇಶಿ ಕನ್ನಡಿಗರಿಗೆ ಇನ್ನೊಂದು ವೆಬ್‌ನಾರ್‌ನ್ನು ಅಭಿವೃದ್ಧಿ ಪ್ರಾಧಿಕಾರ ಆಯೋಜಿಸಿತ್ತು. ಈ ಬಗೆಯ ಭಿನ್ನ ದೇಶಿ ಮತ್ತು ವಿದೇಶಿ ಕನ್ನಡ ಸಂಘಟನೆಗಳ ಕಾರ್ಯಕ್ರಮಗಳ ಆಯೋಜನೆ ಯಾಕೋ ಕನ್ನಡದ ಒಳಿತಿಗೆ ಒಳ್ಳೆಯದಲ್ಲವೇನೊ? ಯಾವ ಕಾರಣಗಳ ತಳಹದಿಯ ಮೇಲೆ ಈ ಬಗೆಯ ದೇಶಿ ಮತ್ತು ವಿದೇಶಿ ಕನ್ನಡ ಸಂಘಟನೆಗಳ ಭಿನ್ನ ವೆಬ್‌ನಾರ್ ಗಳನ್ನು ಪ್ರಾಧಿಕಾರ ಆಯೋಜಿಸಿತ್ತು ಎಂಬುದರ ಬಗ್ಗೆ ಇನ್ನೂ ವಿವೇಚನೆ ಅಗತ್ಯವೆಂಬುದು ನನ್ನ ಭಾವನೆ. ಬಹುಶಃ ಈ ಕನ್ನಡ ಸಂಘಟನೆಗಳ ಅವಶ್ಯಕತೆಗಳು ಮತ್ತು ಕಾರ್ಯಪರಿಧಿಗಳು ಭಿನ್ನವಾಗಿರುವದೇ ಕಾರಣವಾಗಿರಬಹುದು. ನಮ್ಮ ದೇಶದ ಹಲವಾರು ಭಾಗಗಳಲ್ಲಿರುವ ಕನ್ನಡ ಸಂಘಟನೆಗಳು, ಅದರಲ್ಲೂ ಪ್ರಮುಖವಾಗಿ ಗಡಿನಾಡಿನಲ್ಲಿರುವ ಕನ್ನಡ ಸಂಘಟನೆಗಳು ಎದುರಿಸುತ್ತಿರುವ ಸಮಸ್ಯೆಗಳು, ಅತ್ಯಂತ ವಿಶಿಷ್ಟವಾಗಿವೆ ಮತ್ತು ಗಂಭೀರವಾಗಿವೆ. ಈ ಎಲ್ಲ ಸಂಘಟನೆಗಳಿಗೆ ಸರಕಾರದ ಬೆಂಬಲ ಮತ್ತು ಸಹಾಯ ಅತ್ಯಂತ ಅಗತ್ಯವಾಗಿದೆ.

ಕೊರೊನಾ ತಂದ ಬಹುಮುಖ ಸಂಕಷ್ಟಗಳಿಂದಾಗಿ ಕರ್ನಾಟಕ ಸರಕಾರಕ್ಕೆ (ದೆಹಲಿ ಮತ್ತು ಕೇಂದ್ರ ಸರಕಾರಗಳು) ಮುಂದಿನ ಒಂದೆರಡು ವರ್ಷಗಳಲ್ಲಿ ಈ ಎಲ್ಲ ಸಂಘಟನೆಗಳಿಗೆ ಆರ್ಥಿಕ ಬೆಂಬಲ ನೀಡಲು ಸಾಧ್ಯಾವಾಗದಿರಬಹುದು. ಆದರೆ, ಗಡಿನಾಡಿನ ಮತ್ತು ಹೊರನಾಡಿನ ವಿಶ್ವವಿದ್ಯಾಲಯಗಳಲ್ಲಿ ಮತ್ತು ಇತರ ಸಂಸ್ಥೆಗಳಲ್ಲಿ ಹಲವಾರು ವರ್ಷಗಳಿಂದ ಮತ್ತು ಹಲವಾರು ಕಾರಣಗಳಿಂದಾಗಿ ನೆನೆಗುದಿಗೆ ಬಿದ್ದಿರುವ ಕನ್ನಡ ಪೀಠಗಳನ್ನು, ಕನ್ನಡ ವಿಭಾಗಗಳನ್ನು, ಕನ್ನಡ ಕಲಿಸುವ ಶಾಲೆಗಳನ್ನು ಪುನಃಶ್ಚೇತನಗೊಳಿಸುವ ಕಾರ್ಯವನ್ನು ತ್ವರಿತಗತಿಯಲ್ಲಿ ಮಾಡಬಹುದು. ಇವೆಲ್ಲ ಪೀಠಗಳು, ವಿಭಾಗಗಳು ಸರಕಾರದ ಆರ್ಥಿಕ (ಮುಂಗಡ ಪತ್ರಗಳ) ಭಾಗಗಳು. ಹೀಗಾಗಿ ಈ ಕಾರ್ಯವನ್ನು ಊರ್ಜಿತಗೊಳಿಸಲು ಕರ್ನಾಟಕ ಸರಕಾರಕ್ಕೆ ಯಾವುದೇ ತೊಂದರೆಯಾಗಿರಬಾರದು.

ಈಗ ಕೊರೊನಾ ವಿರುದ್ಧದ ಹೋರಾಟವೆಂದರೆ, ನಮ್ಮನಮ್ಮೊಳಗಿನ ಹೊರಾಟವೇ ಸರಿ. ಅದರಲ್ಲಿ ನಾವೆಲ್ಲ ನಮ್ಮದೇ ಆದ ರೀತಿಯಲ್ಲಿ ಭಾಗಿಗಳಾಗದೆ ಬೇರೆ ದಾರಿಯಿಲ್ಲ.

***ಡಾ. ವೆಂಕಟಾಚಲ ಹೆಗಡೆ***
***ಅಧ್ಯಕ್ಷರು***

## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳೇ,

ಈ ಸಮಯದಲ್ಲಿ ದೆಹಲಿ ಕರ್ನಾಟಕ ಸಂಘದ ಮಾಸಪತ್ರಿಕೆ 'ಅಭಿಮತ' ತಮಗೆ ಪೋಸ್ಟ್ ಮುಖಾಂತರ ಸಿಗುತ್ತಿಲ್ಲ.

ಕಾರಣ ಕೇಂದ್ರ ಸರ್ಕಾರ ತೆಗೆದುಕೊಂಡ ಕೆಲವು ನಿರ್ಧಾರಗಳನ್ನು ಗಮನಿಸಿ ಅಭಿಮತವನ್ನು ನಾವು ಸದಸ್ಯರಿಗೆ ಪಿಡಿಎಫ್ ಮಾಡಿ ಇಮೇಲ್ ಮುಖಾಂತರ ಕಳಿಸುತ್ತಿದ್ದೇವೆ. ತಮಗೆ ತಿಳಿದ ಹಾಗೆ ಸಾಮಾಜಿಕ ಅಂತರ ಗಮನದಲ್ಲಿಟ್ಟುಕೊಂಡು ದೆಹಲಿ ಕರ್ನಾಟಕ ಸಂಘದಲ್ಲಿ ನಡೆಯಬೇಕಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳು ಸಂಪೂರ್ಣವಾಗಿ ಸದ್ಯಕ್ಕೆ ನಿಂತಿದೆ. ಬರುವ ದಿನಗಳಲ್ಲಿ ಈ ಮಾರಕ ರೋಗ ಕೊರೊನ ಮುಕ್ತಾಯದ ನಂತರ ಕಾರ್ಯಕ್ರಮಗಳನ್ನು ಮಾಡಲು ಪ್ರಯತ್ನಿಸೋಣ.

ಈ ಸಮಯದಲ್ಲಿ ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು ಸುರಕ್ಷಿತವಾಗಿ ಮನೆಯಲ್ಲಿ ಇರಿ. ಸಣ್ಣ ಮಕ್ಕಳು ಮತ್ತು ಹಿರಿಯರನ್ನು ಜೋಪಾನವಾಗಿ ಜಾಗ್ರತೆಯಿಂದ ಕಾಪಾಡಿಕೊಳ್ಳೋಣ ಮತ್ತು ಈ ಮಾರಕ ರೋಗವನ್ನು ಸಂಪೂರ್ಣವಾಗಿ ಮುಕ್ತ ಮಾಡೋಣ.

ನನಗೆ ತಿಳಿದ ಹಾಗೆ ದೆಹಲಿ ಕರ್ನಾಟಕ ಸಂಘದ ಕೆಲವು ಸದಸ್ಯರುಗಳಿಗೆ ಕೊರೊನ ತಗುಲಿತ್ತು. ಯಾವುದೇ ತೊಂದರೆ ಇಲ್ಲದೆ ಸಂಪೂರ್ಣವಾಗಿ ಕೆಲವರು ಗುಣಮುಖರಾಗಿದ್ದಾರೆ. ಕೆಲವರು ಗುಣಮುಖವಾಗುತ್ತಿದ್ದಾರೆ. ದೇವರು ಅವರಿಗೆ ಆರೋಗ್ಯವನ್ನು ನೀಡಲಿ. ಅವರಿಗೆ ಶುಭವಾಗಲಿ.

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*

# ಅಗಲಿದ ಹಿರಿಯ ಸಾಹಿತಿ ಶಾಂತಾದೇವಿ ಕಣವಿ



ಪ್ರಸಿದ್ಧ ಕವಿ ಚೆನ್ನವೀರ ಕಣವಿಯವರ ಪತ್ನಿ, ಹಿರಿಯ ಲೇಖಕಿ ಶಾಂತಾದೇವಿ ಕಣವಿ (88) ದಿನಾಂಕ 22.05.2020ರಂದು ವಿಧಿವಶರಾಗಿದ್ದಾರೆ.

ಕಥೆಗಾರ್ತಿ, ಲೇಖಕಿಯಾಗಿ ಹೆಸರಾಗಿದ್ದ ಶಾಂತಾದೇವಿಯವರು ನಾಲ್ವರು ಗಂಡು ಮಕ್ಕಳು ಹಾಗೂ ಓರ್ವ ಹೆಣ್ಣು ಮಗಳನ್ನು ಅಗಲಿದ್ದಾರೆ.

ಶಾಂತಾದೇವಿಯವರು ಚೆನ್ನವೀರ ಕಣವಿಯವರನ್ನು ವಿವಾಹವಾಗಿ ಅವರ ಸಾಹಿತ್ಯ ಸೃಷ್ಟಿಗೆ ಸ್ಫೂರ್ತಿಯಾಗಿದ್ದರು.

1933ರಲ್ಲಿ ವಿಜಯಪುರದಲ್ಲಿ ಜನಿಸಿದ್ದ ಶಾಂತಾದೇವಿ ಕಣವಿ ಉತ್ತರ ಕರ್ನಾಟಕದ ದೇಸಿ ಸೊಬಗು, ಧ್ವನಿಪೂರ್ಣ ಭಾಷೆ, ತಂತ್ರಗಾರಿಕೆ, ಕಸರತ್ತಿಲ್ಲದ ಬರವಣಿಗೆಗೆ ಹೆಸರಾಗಿದ್ದರು. ಶಾಂತಾದೇವಿ ಕಣವಿಯವರ ಕಥೆಗಳು ಸಾಕಷ್ಟು ಜನಪ್ರಿಯವಾಗಿದೆ.

ಸಂಜೆಮಲ್ಲಿಗೆ, ಬಯಲು–ಆಲಯ, ಮರು ವಿಚಾರ, ಜಾತ್ರೆ ಮುಗಿದಿತ್ತು, ಕಳಚಿಬಿದ್ದ ಪೈಜಣ, ನೀಲಿಮಾತೀರ ಇವು ಶಾಂತಾದೇವಿಯವರ ಕಥಾಸಂಕಲನಗಳು. ಅಜಗಜಾಂತರ– ಹರಟೆಗಳ ಸಂಗ್ರಹ. ನಿಜಗುಣ ಶಿವಯೋಗಿ ಎಂಬ ಮಕ್ಕಳ ಸಾಹಿತ್ಯ ಸಹ ಪ್ರಕಟಿಸಿದ್ದರು.

ಬಯಲು–ಆಲಯ ಕಥಾಸಂಕಲನಕ್ಕೆ 1974ರ ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ ಲಭಿಸಿತ್ತು. 1987ರಲ್ಲಿ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿಗೆ ಸಹ ಶಾಂತಾದೇವಿ ಭಾಜನರಾಗಿದ್ದರು.

ಅವರ ಅನೇಕ ಕಥೆಗಳು ಹಿಂದಿ, ಇಂಗ್ಲಿಷ್, ಮಲೆಯಾಳಂಗೂ ಭಾಷಾಂತರವಾಗಿದೆ. ಶಾಂತಾದೇವಿಯವರ ಪುತ್ರಿ ಡಾ. ರಂಜನಾ ಗೋಡಿ ಅವರೂ ಕವಯಿತ್ರಿಯಾಗಿದ್ದಾರೆ.

ಅಗಲಿದ ಹಿರಿಯ ಸಾಹಿತಿ ಶಾಂತಾದೇವಿ ಕಣವಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

# ಎಸ್.ಎಂ. ಕೃಷ್ಣ ಅವರ ಅಭಿನಂದನಾ ಗ್ರಂಥ ಸಂಘಕ್ಕೆ ಕೊಡುಗೆ





ಕರ್ನಾಟಕದ ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಮಾಜಿ ವಿದೇಶಾಂಗ ಸಚಿವ ಸನ್ಮಾನ್ಯ ಎಸ್.ಎಂ. ಕೃಷ್ಣ ಅವರ ಜೀವನ ಹಾಗೂ ರಾಜಕೀಯ ಒಡನಾಟಗಳನ್ನು ಒಳಗೊಂಡ 'ಕೃಷ್ಣ ಪಥ' ಅಭಿನಂದನಾ ಗ್ರಂಥವನ್ನು ಕನ್ನಡ ಚಿತ್ರರಂಗದ ಹಿರಿಯ ಕಲಾವಿದ ನಾಗರಾಜ್ ಮೂರ್ತಿ ಅವರು ದೆಹಲಿ ಕರ್ನಾಟಕ ಸಂಘಕ್ಕೆ ದೇಣಿಗೆಯಾಗಿ ನೀಡಿದರು. ಈ ಕೃತಿಯನ್ನು ಸಂಘದ ಗ್ರಂಥಾಲಯಕ್ಕೆ ಸೇರಿಸುವಂತೆ ಕೋರಿ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಕಾರ್ಯಕಾರಿ ಸಮಿತಿ ಸದಸ್ಯ ಸಂತೋಷ ಜೆ. ಮತ್ತು ನೃತ್ಯ ಕಲಾವಿದ ವಿದ್ವಾನ್ ಕೋಲಾರ್ ರಮೇಶ್ ಸಮ್ಮುಖದಲ್ಲಿ ನೀಡಿದರು.

ಸಾರ್ವಜನಿಕ ಬದುಕಿನ ಜೊತೆ ಜೊತೆಯಲ್ಲಿ ಎಸ್.ಎಂ. ಕೃಷ್ಣ  ತಮ್ಮ ವೈಯಕ್ತಿಕ ಹವ್ಯಾಸಗಳಾದ ಸಾಹಿತ್ಯ, ಶಾಸ್ತ್ರೀಯ ಸಂಗೀತ, ಚಿತ್ರಕಲೆ ಹಾಗೂ ಟೆನಿಸ್ ಕ್ರೀಡೆಗಳ ಪ್ರೇಮದಿಂದಾಗಿ ರಾಜ್ಯದ ಸಾಂಸ್ಕೃತಿಕ ಮನಸ್ಸುಗಳಿಗೆ ಪ್ರಿಯವೆನಿಸಿದ್ದಾರೆ.

ಇಂತಹ ಹತ್ತಾರು ಸಂಗತಿಗಳನ್ನು ಇಲ್ಲಿನ ಎಲ್ಲಾ ಲೇಖಕರು ಹೆಮ್ಮೆಯಿಂದ, ಪ್ರೀತಿಯಿಂದ ಹಾಗೂ ಅಭಿಮಾನದಿಂದ  ಹೇಳಿದ್ದಾರೆ ಎಂದು ಕೃತಿಯ ಬೆನ್ನುಡಿಯಲ್ಲಿ ಡಾ. ಬಿ.ಎಲ್. ಶಂಕರ್ ಬರೆದಿದ್ದಾರೆ.

***ಸಂತೋಷ ಜೆ.***




'ಕೃಷ್ಣ ಪಥ' ಅಭಿನಂದನಾ ಗ್ರಂಥ

# ದೆಹಲಿಯಲ್ಲಿರುವ ಕನ್ನಡಿಗರನ್ನು ತಾಯ್ನಾಡಿಗೆ ತಲುಪಿಸಲು ನೆರವಾದ ಕರ್ನಾಟಕ ಭವನ

ಕರ್ನಾಟಕ ಭವನವು ದೇಶದ ರಾಜಧಾನಿ ದೆಹಲಿಯಲ್ಲಿ ನೆಲೆಗೊಂಡಿರುವುದು ನಿಜಕ್ಕು ರಾಜ್ಯ ಜೀವ ನಾಡಿಯಾಗಿದೆ ಎಂದರೆ ತಪ್ಪಾಗಲಾರದು. ರಾಜ್ಯದ ಜನತೆ ಹೊರ ದೇಶದಲ್ಲಿ ಹೊರ ರಾಜ್ಯದಲ್ಲಿ ಸಂಕಷ್ಟಕ್ಕೆ ಸಿಲುಕಿದ ಸಂದರ್ಭದಲ್ಲಿ ಸಂಜೀವಿನಿಯಂತೆ ಕಾರ್ಯ ಮಾಡುತ್ತಾ ಬಂದಿರುತ್ತದೆ. ಕರ್ನಾಟಕ ಭವನದಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳು ಎಂತಹ ಕಠಿಣ ಪರಿಸ್ಥಿತಿಗಳು ಬಂದರೂ ಎದುರಿಸಲು 24 ಗಂಟೆಗಳ ಕಾಲ ಸಿದ್ಧರಿರಬೇಕು.

ಕರ್ನಾಟಕ ಸರ್ಕಾರದ ಸಂಸ್ಥೆಯಾದ ಕರ್ನಾಟಕ ಭವನವು ಅತಿಥಿ ಸತ್ಕಾರವನ್ನು ಹೊರತುಪಡಿಸಿ ಒಂದು ನಿರ್ದಿಷ್ಟ ರೀತಿಯ ಕೆಲಸ ಕಾರ್ಯದ ವೈಖರಿಯನ್ನು ಹೊಂದಿರುವುದಿಲ್ಲ. ಘಟನೆ ಸಣ್ಣದಿರಲಿ ದೊಡ್ಡದಿರಲಿ ಅಥವಾ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯಿರಲಿ ಅದಕ್ಕೆ ಸ್ಪಂದಿಸಿ ತುರ್ತಾಗಿ ಕಾರ್ಯ ಪ್ರವೃತ್ತವಾಗುತ್ತಾ ರಾಜ್ಯದ ಮುಂಚೂಣಿಯ ಸಂಸ್ಥೆ ಕರ್ನಾಟಕ ಭವನವಾಗಿರುತ್ತದೆ.

ಈ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುವುದೇ ಒಂದು ಸೌಭಾಗ್ಯವೆಂದು ತಿಳಿದು ಸಿಬ್ಬಂದಿಗಳು ತಮ್ಮ ತಾಯಿನಾಡಿನ ಹೆಸರನ್ನು ಸ್ಮರಿಸಿ ಉತ್ಸುಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕರ್ನಾಟಕ ಸರ್ಕಾರವು ಕೂಡ ಸಿಬ್ಬಂದಿಗಳನ್ನು ಮಕ್ಕಳಂತೆ ಪಾಲನೆ ಪೋಷಣೆ ಮಾಡುತ್ತಿದೆ.

ಇತ್ತೀಚಿಗೆ ಕೊರೊನ ಸೋಂಕಿತರನ್ನು, ದೆಹಲಿ ಹಾಗೂ ಇನ್ನಿತರೆ ಉತ್ತರ ಭಾರತದ ರಾಜ್ಯದಲ್ಲಿ ಸಿಲುಕಿದ ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳು, ಪ್ರವಾಸಿಗರು, ಖಾಸಗಿ ಕಂಪನಿಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ನೌಕರರು, ವ್ಯಾಪಾರಿಗಳು, ಅಲೆಮಾರಿ ಜನಾಂಗದವರು ಹೀಗೆ ಹತ್ತು ಹಲವು ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ರಾಜ್ಯದ ಜನರನ್ನು ತಾಯ್ನಾಡಿಗೆ ತಲುಪಿಸುವಲ್ಲಿ ನವದೆಹಲಿಯ ಕರ್ನಾಟಕ ಭವನದ ಮಾನ್ಯ ನಿವಾಸಿ ಆಯುಕ್ತರಾದ ಶ್ರೀಯುತ ನಿಲಯ ಮಿತಾಶ್ ಹಾಗೂ ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಕೊಡುಗೆ ಬಹುಮುಖ್ಯವಾಗಿದೆ.

ಇವರ ನಿರ್ದೇಶನದಂತೆ ನಿವಾಸಿ ಆಯುಕ್ತರವರ ಕಛೇರಿ ಹಾಗೂ ಕರ್ನಾಟಕ ಭವನದ ಅಧಿಕಾರಿಗಳು, ಸಿಬ್ಬಂದಿಗಳು ಹಗಲು ರಾತ್ರಿ ಎನ್ನದೇ ಉತ್ತರ ಭಾರತದ ಇತರೇ ರಾಜ್ಯದಲ್ಲಿ ಸಿಲುಕಿರುವ ಕರ್ನಾಟಕ ರಾಜ್ಯದ ಜನತೆಯನ್ನು ಕರ್ನಾಟಕ ಸರ್ಕಾರದ ನಿರ್ದೇಶನದಂತೆ ಕರ್ನಾಟಕ ಸರ್ಕಾರದ ಆರೋಗ್ಯ ಸೇತುವಿನಲ್ಲಿ ನೊಂದಣಿಗೊಂಡ ರಾಜ್ಯದ ಜನರನ್ನು ಸಂಪರ್ಕಿಸಿ, ಅವರಿರುವ ಜಾಗಕ್ಕೆ ತೆರಳಿ ರೈಲಿನ ವ್ಯವಸ್ಥೆ ಮಾಡಿ ಅವರಿಗೆ ಮೂರು ದಿನಗಳ ಊಟದ ವ್ಯವಸ್ಥೆಗೊಳಿಸಿ ರಾಜ್ಯಕ್ಕೆ ಕಳುಹಿಸಿಕೊಡಲಾಗಿರುತ್ತದೆ.

ಕೊರೊನ ಮಹಾಮಾರಿಯಿಂದ ಬದುಕುಳಿಯಲು ರೋಗದ ಲಕ್ಷಣಗಳನ್ನು ಅರಿತು ಸುರಕ್ಷಾಕ್ರಮವನ್ನು ಅನುಸರಿಸಿ, ನನ್ನ ಆರೋಗ್ಯ ನಮ್ಮ ಸಮಾಜದ ಆರೋಗ್ಯವೆಂದು ತಿಳಿದು ಸರ್ಕಾರದ ನಿರ್ದೇಶನಗಳನ್ನು ಪಾಲಿಸಿ, ಸುರಕ್ಷಿತ ಮತ್ತು ಆರೋಗ್ಯ ಸಮಾಜವನ್ನು ನಿರ್ಮಾಣ ಮಾಡುವುದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ.

***ಎಸ್. ಕುಮಾರ***

## ಯುಗ

ಅಂಧಕಾರ ಯುಗ – ಸತ್ಯಯುಗ :
ಶಿಲಾಯುಗ – ತ್ರೇತಾಯುಗ :
ಲೋಹಯುಗ – ದ್ವಾಪರಯುಗ :
ಮನುಕುಲ – ಸಂಖ್ಯಾಯುಗ :
ಮನುಕುಲ – ಸಂಖ್ಯಾಕುಲ :
ಸಹಸ್ರಯುಗ – Y2K ಯುಗ :

ಕಛೇರಿಯಲ್ಲಾಗಲಿ, ಕುರ್ಚಿಯಲ್ಲಾಗಲಿ, ಆಸ್ಪತ್ರೆಯ ಹಾಸಿಗೆಯಲ್ಲಾಗಲಿ, ಮನುಷ್ಯರನ್ನು ಹುಡುಕಲು ಹೆಸರು ಕೇಳಬೇಡಿ ಸಂಖ್ಯೆಯನ್ನು ಕೇಳಿ. ಬಸ್‌ನ ಹೊರಗಡೆ, ಕಾರಾಗೃಹದ ಒಳಗಡೆ ರೈಲು ಗಾಡಿಯ ಭೋಗಿಯೊಳಗೆ ತಲೆಯಲ್ಲಿ ಧಿಮ್ಮನೆ ಕಾಡುವ ಸಂಖ್ಯೆ!!!

ಭಯಂಕರ ಬಿಸಿಲಿನ ಪ್ರಕರತೆಯಲ್ಲಿ ಶವಾಗಾರದ ನಿಶ್ಯಬ್ಧ ವಾತಾವರಣದಲ್ಲಿ ಎಲ್ಲೆಲ್ಲಿಯೂ ಎತ್ತಿ ಕಾಣುವ ಸಂಖ್ಯೆ!!!

ಹಿಂದಿನ ಕಾಲದಿಂದಲೂ ಬಂದ ಸಂಖ್ಯೆ ಎಂಬ ಪದ್ಯವೇ ಇದೆ.

ಒಂದು – ಎರಡು ಬಾಳೆಲೆ ಹರಡು
ಮೂರು – ನಾಲ್ಕು ಅನ್ನಹಾಕು
ಐದು – ಆರು ಅನ್ನಕ್ಕೆ ಸಾರು
ಏಳು – ಎಂಟು ಪಲ್ಯಕ್ಕೆ ದಂಟು
ಒಂಭತ್ತು – ಹತ್ತು ಊಟವಾಯಿತು ಎಲೆಮುದುರೆತ್ತು !!!

ಅಂಕೆ ಅರಿವಿಲ್ಲದ ಈ ಸಂಖ್ಯೆ ಎಲ್ಲೆಲ್ಲಿಯೂ ಪ್ರತೀಕ್ಷೆ – ನಿರೀಕ್ಷೆ – ಆಕಾಂಕ್ಷೆ.

***ಡಾ. ಅಹಲ್ಯಾ ಚಿಂತಾಮಣಿ***

## ಭಿವಾಡಿ ಕನ್ನಡ ಸಂಘದ ಸಕ್ರಿಯ ಸದಸ್ಯ ಬದ್ರಿನಾಥ ಮಾನ್ಕರಿ ನಿಧನ



ಮೂಲತಃ ಬೆಂಗಳೂರಿನವರಾಗಿದ್ದು ಕಳೆದ ಒಂದೆರಡು ವರ್ಷಗಳಿಂದ ಭಿವಾಡಿಯಲ್ಲಿ ಉದ್ಯೋಗ ನಿಮಿತ್ತ ನೆಲೆಸಿದ್ದ ಶ್ರೀ ಬದ್ರಿನಾಥ ಮಾನ್ಕರಿ ಅವರು ದಿನಾಂಕ 18.05.2020ರಂದು ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರು ಪತ್ನಿ, ಇಬ್ಬರು ಗಂಡು ಮಕ್ಕಳನ್ನು ಅಗಲಿದ್ದಾರೆ.

ಎರಡು ವರ್ಷಗಳ ಪರಿಚಯದಿಂದ ಭಿವಾಡಿಯವರಿಗೆ ಮಾತ್ರವಲ್ಲ, ಗುರುಗ್ರಾಮ ಸಹಿತ ರಾಜಧಾನಿ ಪರಿಸರದ ಹೆಚ್ಚಿನ ಎಲ್ಲಾ ಕನ್ನಡಿಗರಿಗೆ ಆತ್ಮೀಯರಾಗಿದ್ದ ನಮ್ಮ ಬದರಿಯವರು ಅಜಾತಶತ್ರು ಆಗಿ ನಗುಮುಖದಿಂದ ಎಲ್ಲಾ ಪರಿಸ್ಥಿತಿಗಳನ್ನೂ ಎದುರಿಸುತ್ತಿದ್ದರು. ಇವರು ದೇಶದ 4–5 ತಾಣಗಳಲ್ಲಿ ವೃತ್ತಿಜೀವನ ನಡೆಸಿದ್ದರೂ ದೆಹಲಿ ಸಮೀಪದ ಭಿವಾಡಿಯೇ ಅವರ ಅಂತಿಮ ಯಾತ್ರಾ ತಾಣವಾದ್ದಲ್ಲದೇ ಗುರುಗ್ರಾಮದ ಮೇದಾಂತ ಆಸ್ಪತ್ರೆಯಲ್ಲಿ ಅಸುನೀಗಿದ್ದರು. ಶ್ರೀಯುತರ ನಿಜವಾದ ಅಂತ್ಯಯಾತ್ರೆಯಲ್ಲೂ ತಮ್ಮ ಹಿರಿಮಗ ಸಾತ್ವಿಕ ನ ಜೊತೆ ಹೆಗಲು ಕೊಟ್ಟವರು ಭಿವಾಡಿಯ ಬೆರಳೆಣಿಕೆ ಯಷ್ಟು ಸಹೋದ್ಯೋಗಿಗಳು ಮತ್ತು ಗುರುಗ್ರಾಮದ ಕನ್ನಡಿಗ ಮಿತ್ರವೃಂದವೇ ಎಂಬುದು ಕೊರೊನಕಾಲ ವಿಧಿಲೀಲೆಯೇ ಸರಿ.

ಭಿವಾಡಿ ಕನ್ನಡಿಗರಿಗೆ ದಿವಂಗತರ ನೈಜ ವ್ಯಕ್ತಿತ್ವದ ಪರಿಚಯವಾದದ್ದು ಕಳೆದ ವರ್ಷ ಜನವರಿ 26ರಂದು. ನಾವೆಲ್ಲಾ ಅವರ ವಾಸಸ್ಥಾನದ ಬಳಿ ಆಯೋಜಿಸಿದ್ದ ಲಿಂ. ಶ್ರೀ ಶಿವಕುಮಾರ ಸ್ವಾಮೀಜಿಯವರ ಶ್ರದ್ಧಾಂಜಲಿ ಕಾರ್ಯಕ್ರಮದಂದು ಎಂದರೆ ತಪ್ಪಾಗಲಾರದು. ನಮಗೆಲ್ಲಾ ಅಗಲಿದ ನಡೆದಾಡುವ ದೇವರ ದೈವೀದರ್ಶನ ಮಾಡಿಸಿದ ಅವರು ಇಂದು ನಮ್ಮನ್ನೆಲ್ಲಾ ಅಗಲಿದ್ದಾರೆಂದು ಹೇಳಬಾರದು. ಇವರು ನಮಗೆ ಸಹಬಾಳ್ವೆ ಸದಾ ನಗುಮುಖದ ವ್ಯವಹಾರದ ತಿಳುವಳಿಕೆಯನ್ನು ಬಿಟ್ಟು ಹೋಗಿದ್ದಾರೆ, ಎನ್ನುವುದು ಸೂಕ್ತ.

ಎಲ್ಲಾ ಕನ್ನಡಿಗರ ಪರವಾಗಿ ದಿವಂಗತರಿಗೆ ಅಂತಿಮ ನಮನಗಳೊಂದಿಗೆ ಅಶ್ರುತರ್ಪಣಗಳು

***ಗೋಪಾಲಕೃಷ್ಣ ಭಟ್***

# ಕೊರೊನಾ ಮಹಾಮಾರಿಗೆ ಆಯುರ್ವೇದ ರಾಮಬಾಣ

**-ಡಾ. ಭೀಮ ಭಟ್**

***-ಸಂದರ್ಶಕರು : ಸಂತೋಷ್ ಕುಮಾರ್‌ಉಪಾಧ್ಯಾಯ***

ದೆಹಲಿಯ ಖ್ಯಾತ ಆಯುರ್ವೇದ ತಜ್ಞ **ಡಾ. ಭೀಮ ಭಟ್** ಅವರು ಕೋವಿಡ್-19ರ ಹಿನ್ನೆಲೆಯಲ್ಲಿ **ಅಭಿಮತ**ಕ್ಕೆ ವಿಶೇಷ ಸಂದರ್ಶನ ನೀಡಿದ್ದಾರೆ. ಅಭಿಮತ ಸಂಪಾದಕ ಬಳಗದ **ಸಂತೋಷ್ ಕುಮಾರ್ ಉಪಾಧ್ಯಾಯ** ಅವರಿಗೆ ನೀಡಿದ ಸಂದರ್ಶನ ಇಲ್ಲಿದೆ. ನಮ್ಮೊಂದಿಗೆ ಉಪಯುಕ್ತ ಸಲಹೆ ಮತ್ತು ಮಾಹಿತಿಗಳೊಂದಿಗೆ ವಿಚಾರಗಳನ್ನು ಹಂಚಿಕೊಂಡ ಡಾ. ಭೀಮ ಭಟ್ ಅವರಿಗೆ ನಮ್ಮ ಧನ್ಯವಾದಗಳು.

**-ಸಂಪಾದಕ**



**ಸಂತೋಷ್ : ಆಯುರ್ವೇದದಲ್ಲಿ ಹಿತಭುಕ್ ಮಿತಭುಕ್ ಋತಭುಕ್ ಅಂತ ಹೇಳ್ತಾರೆ, ಜೊತೆಗೆ ಸರ್ವಸ್ಯಮೌಷಧಮಸ್ತಿ ಶಾಸ್ತ್ರವಿಹಿತಂ ಅಂತ ಕೂಡ ಹೇಳ್ತಾರೆ. ಈಗ ಜನರು ತಿಳಿದೋ, ತಿಳಿದೇನೋ ಏನೇನೋ ತಿಂದು ಬಿಟ್ಟು ಕೊವಿಡ್-19 ಮಹಾಮಾರಿ ಜಗತ್ತಿಗೆ ಆವರಿಸಿಕೊಂಡಿದೆ, ಇದನ್ನ ಗುಣಪಡಿಸೋದಕ್ಕೆ ಕೇವಲ ಆಯುರ್ವೇದದಿಂದ ಸಾಧ್ಯವೇ ಅಥವಾ ಹೋಮಿಯೋಪಥಿ- ಆಲೋಪಥಿ ಕಾಂಬಿನೇಷನ್‌ನಲ್ಲಿ ಸಾಧ್ಯನಾ?**

**ಡಾ. ಭಟ್ :** ಆಯುರ್ವೇದಕ್ಕೆ ಸುಮಾರು ಐದು ಸಾವಿರ ವರ್ಷಗಳ ಇತಿಹಾಸ ಇದೆ. ಇದು ವೇದದಿಂದ ಬಂದಿರುವಂಥದ್ದು. ಯಾವ ರೋಗಕ್ಕೆ ಯಾವ ಔಷಧ ಕೊಡಬೇಕು ಅಂತ ಅದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಈ ಕೊರೊನಾದ ಬಗ್ಗೆ ಆಯುರ್ವೇದದಲ್ಲಿ ಹೇಳಿದಾರಾ ಅಥವಾ ಆ ಕಾಲಘಟ್ಟದಲ್ಲಿ ಇದು ಇತ್ತಾ ಅನ್ನೋದರ ಬಗ್ಗೆ ಒಂದು ಪ್ರಶ್ನೆ ಬರುತ್ತೆ. ಕೆಲವು ಆಲೋಪಥಿ ಡಾಕ್ಟರ್ಸ್‌ಹೇಳ್ತಾರೆ- ಕೊರೊನಾದ ಬಗ್ಗೆ ಆಯುರ್ವೇದದಲ್ಲಿ ಹೇಳೇ ಇಲ್ಲ ಅಂತ. ಹಾಗಲ್ಲ ಅದು ಯಾವ ಯಾವ ರೋಗ ಬಂದ್ರೆ ಯಾವ ಯಾವ ರೀತಿ ಅರ್ಥ ಮಾಡ್ಕೋಬೇಕು ಅಂತ ಆಯುರ್ವೇದದಲ್ಲಿ ಸ್ಪಷ್ಟವಾಗಿ ಹೇಳಿದೆ. ಈಗ ನೋಡಿ ಈ ರೋಗ ವುಹಾನ್‌ನಿಂದ ಶುರುವಾಯ್ತು. ಯಾಕೆ ಶುರುವಾಯ್ತು? ಮಿಥ್ಯಾ ಆಹಾರ ವಿಹಾರಾಭ್ಯಾಂ... ಅಂದ್ರೆ ಇದು ಒಳ್ಳೇ ಆಹಾರ, ವಿಹಾರಗಳಲ್ಲ ಅಂತ ತಿಳಿದೂ ಕೂಡಾ ನಾವು ಅವನ್ನ ಸೇವನೆ ಮಾಡ್ತೀವಲ್ಲ ಅದರಿಂದ ಶುರುವಾಗುವಂಥದ್ದು ಇದು. ಎಲ್ಲಾ ಥರದ ಪ್ರಾಣಿಗಳನ್ನೂ ಹಿಂದೆ ಮುಂದೆ ನೋಡದೇ ತಿಂದಿದ್ರಿಂದಾಗಿ ಇದು ಶುರುವಾಯ್ತು. ಆಮೇಲೆ ಇದು ಬಾವಲಿಯಿಂದ ಬಂದಿದ್ದು ಅಂತ ಹೇಳ್ತಾರೆ. ಚರಕ ಸಂಹಿತೆಯಲ್ಲಿ ವಿಮಾನಸ್ಥಾನ ಮೂರನೇ ಮತ್ತು ಏಳನೇ ಅಧ್ಯಾಯದಲ್ಲಿ ಕೊರೊನಾ ವೈರಸ್ ಅಂತ ಹೇಳಿಲ್ಲ.ಆದರೆ ಅದಕ್ಕೆ ಬೇರೆ ಹೆಸರಲ್ಲೇ ಹೇಳಿದ್ದಾರೆ. ಶ್ಲೇಷ್ಮಜ ಸೂಕ್ಷ್ಮ ಕ್ರಿಮಿ ಅಂತ ಹೇಳ್ತಾರೆ. ಇದು ಮೂಗು, ಗಂಟಲಿನ ಮೂಲಕ ಶ್ವಾಸಕೋಶಕ್ಕೆ ಪ್ರಭಾವ ಬೀರುವಂಥದ್ದು. ಚರಕ ಸಂಹಿತೆಯಲ್ಲಿ ಹೇಳಿದಂಥ ಎಲ್ಲಾ ಲಕ್ಷಣಗಳೂ ಕೊರೊನಾದಲ್ಲಿವೆ.

**ಸಂತೋಷ್ : ಹಾಗಾದರೆ ಅದಕ್ಕೊಂದು ಔಷಧ ಇರಲೇ ಬೇಕು.**

**ಡಾ. ಭಟ್ :** ಹೌದು, ನಮ್ಮ ಆಯುರ್ವೇದದಲ್ಲಿ ಹೇಳಿರೋದೇನೂ ಅಂದ್ರೆ "ಸ್ವಸ್ಥಸ್ಯ ಸ್ವಾಸ್ಥ್ಯ ರಕ್ಷಣಂ, ಆತುರಸ್ಯ ರೋಗನುತ" ಅಂದ್ರೆ ಮೊದಲು ನೀವು ನಿಮ್ಮ ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಳ್ಳಬೇಕು, ಅದನ್ನು ವೃದ್ಧಿಸಬೇಕು, ರೋಗ ಬಾರದ ಹಾಗೆ ಮುಂಜಾಗೃತೆ ವಹಿಸಬೇಕು. ಆದಾಗ್ಯೂ ರೋಗ ಬಂದ್ರೆ ಅದಕ್ಕೆ ಏನೇನು ಮಾಡಬೇಕು ಅಂತ ಚರಕ ಸಂಹಿತೆಯಲ್ಲಿ ಸ್ಪಷ್ಟವಾಗಿ ಹೇಳಿದೆ. Prevention is better than cure. ಗಡ್ಡಕ್ಕೆ ಬೆಂಕಿ ಹಿಡಿದಾಗ ಬಾವಿ ತೋಡೋದು ಅಂತ ಗಾದೆ ಮಾತು ಇದೆಯಲ್ಲ, ಹಾಗೆ ನಾವು ಮಾಡಬಾರದು. ದಿನಚರ್ಯ, ಋತುಚರ್ಯಗಳನ್ನು ಚೆನ್ನಾಗಿ ಪಾಲಿಸಬೇಕು. ಆಯಾ ಋತುಗಳಿಗೆ ಸೂಕ್ತವಾದ ಆಹಾರ ಸೇವಿಸಬೇಕು. ಆಲ್ಕೋಹಾಲ್ ಜಾಸ್ತಿ ತಗೋಬಾರ್ದು, ಮಾಡರೇಟ್ ಆಗಿ ತಗೋಬಹುದು ಅಂತ ಹೇಳ್ತೀವಿ ಆದ್ರೆ ಯಾರು ಇದನ್ನ ನಿರ್ಲಕ್ಷ್ಯ ಮಾಡ್ತಾರೋ ಅವರು ಕೊರೊನಾ ಅಂತಲ್ಲ ಯಾವುದೇ ರೋಗಕ್ಕೀಡಾಗೇ ಆಗ್ತಾರೆ.

**ಸಂತೋಷ್ : ಚರಕ ಸಂಹಿತೆಯಲ್ಲಿ ಔಷಧವೇನೋ ಇರಬಹುದು, ಆದರೆ ಅದು ಈಗ ಸಿಗುತ್ತೋ ಇಲ್ವೋ. ತುಂಬಾ ದುರ್ಲಭವಾಗಿರಬಹುದು.**

**ಡಾ. ಭಟ್ :** ಇಲ್ಲ ಇಲ್ಲ, ಹಾಗೇನೂ ಇಲ್ಲ. ಔಷಧಗಳು ಈಗಲೂ ಸಿಗುತ್ತಿವೆ. ಆಗಿನ ಕಾಲದಲ್ಲೂ ಗೋಧಿ, ಅಕ್ಕಿ ಇತ್ಯಾದಿಗಳನ್ನು ತಿನ್ನುತ್ತಾ ಇದ್ರು ಅಲ್ವಾ, ಅದೇ ರೀತಿ ನಿಮಗೆ ಶುಂಠಿ, ಓಂಕಾಳು, ಪುದಿನಾ, ಜ್ಯೇಷ್ಠಮಧು ಇಂಥ ಬಹುಪಾಲು ಔಷಧಗಳು ಈಗಲೂ

ಸಿಗ್ತಾ ಇವೆ. ಈಗ ಸಿಗ್ತಾ ಇರೋ ಶೇ ೯೦ರಷ್ಟು ಮೆಡಿಸಿನ್‌ಗಳನ್ನು ನಾವು ನಮಗೆ ಬೇಕಾದ ಹಾಗೆ ಬಳಸಿಕೊಳ್ಳಬಹುದು. ಚರಕ ಸಂಹಿತೆ, ಸುಶ್ರುತ ಸಂಹಿತೆಗಳಲ್ಲ ಇಂಥ ಸಾಂಕ್ರಾಮಿಕ ರೋಗಗಳು ಆಗಲೂ ಇತ್ತು ಅಂತ ಹೇಳ್ತಾರೆ. ಇಂಥ ಕೊವಿಡ್ 19 ನಂಥ ರೋಗಗಳಿಗೆ ಜನಪದೋದ್ವಂಸ ಅಂತ ಕರೆಯಲಾಗುತ್ತಿತ್ತು. ಜನರು ಸಾಮೂಹಿಕವಾಗಿ ಸಾವನ್ನಪ್ಪುವಂಥದ್ದು. ಇಂಥ ರೋಗಗಳು ಯಾಕೆ ಬರ್ತಾವೆ ಅಂತಂದ್ರೆ ನಮ್ಮ ಧರ್ಮವನ್ನು ಪಾಲಿಸದೇ ಇದ್ದಾಗ. ಯಾರಿಗೆ ಃಜುಥಿ ಡಿಜ್ಞಾಚಿಟಿಥಿಜ ರಿಥಿಜಿಜು ಅಂದ್ರೆ ದೇಹಬಲ ಮತ್ತು ಮನೋಬಲ ಹೆಚ್ಚಿರತ್ತೋ ಅಂಥವರಿಗೆ ಇಂಥ ರೋಗಗಳು ಬರಲಿಕ್ಕಿಲ್ಲ. ಯಾರಿಗೆ ಕಫ ವಾತ ಪ್ರಕೃತಿ ಇದೆಯೋ ಅಂಥವರಿಗೆ ಈ ರೋಗದ ಅಪಾಯ ಹೆಚ್ಚು.

**ಸಂತೋಷ್ : ಈ ಕೊರೊನಾ ರೋಗವನ್ನು ಆಯುರ್ವೇದದ ಮೂಲಕ ನಿಯಂತ್ರಿಸುವುದಕ್ಕಾಗಿ ಸರಕಾರ ಕ್ರಮ ಕೈಗೊಂಡಿರುವ ಬಗ್ಗೆ ನಿಮಗೆ ಮಾಹಿತಿ ಇರಬಹುದು**

**ಡಾ. ಭಟ್ :** ಆಯುರ್ವೇದ, ಯೋಗ, ಯುನಾನಿ, ಸಿದ್ಧ ಮತ್ತು ಹೋಮಿಯೋಪಥಿಗಳನ್ನು ಒಳಗೊಂಡ ಆಯುಷ್ ಡಿಪಾರ್ಟಮೆಂಟ್‌ನಲ್ಲಿ ಈ ಬಗ್ಗೆ ಸಾಕಷ್ಟು ಕೆಲಸ ನಡೀತಾ ಇದೆ. ನಮ್ಮಂಥ ತಜ್ಞರು ಕೂಡಾ ನಮ್ಮ ಸಲಹೆಗಳನ್ನು ಕೊಟ್ಟಿದೀವಿ. ಯಾವ ರೀತಿ ಆಹಾರವನ್ನು ಸೇವಿಸಬೇಕು, ಯಾವ ಮುನ್ನೆಚ್ಚರಿಕೆಗಳನ್ನು ತಗೋಬೇಕು ಅನ್ನೋದನ್ನ ನಾವು ತಿಳಿಸಿದೀವಿ. ಆದ್ರೆ ಜನರು ಸೋಶಿಯಲ್ ಡಿಸ್ಟೆನ್ಸಿಂಗ್ ಪಾಲಿಸಬೇಕು, ಮಾಸ್ಕ್ ಹಾಕ್ಕೋಬೇಕು, ಹೊರಗಡೆ ಏನೇ ಸರ್ಫೇಸನ್ನೂ ಮುಟ್ಟಿದಾಗ ಸಾಬೂನಿಂದ ಚೆನ್ನಾಗಿ ಕೈತೊಳ್ಕೋಬೇಕು. ಇಂಥ ಶಿಸ್ತನ್ನು ಪಾಲಿಸಲೇಬೇಕಾಗತ್ತೆ.

ಆಯುರ್ವೇದ ಒಂದು ಕಷಾಯದ ಬಗ್ಗೆ ಹೇಳುತ್ತೆ. ಅದೇನು ಅಂದ್ರೆ ಒಂದು ಲೋಟ ನೀರಲ್ಲಿ 500 ಮಿ.ಗ್ರಾಂ ಶುಂಠಿ ಪೌಡರ್, 250 ಮಿ.ಗ್ರಾಂ ಕಾಳು ಮೆಣಸಿನ ಪೌಡರ್, 250 ಮಿ.ಗ್ರಾಂ ಪಿಪ್ಪಲಿ, 500 ಮಿ. ಗ್ರಾಂ ದಾಲ್‌ಚಿನಿ ಪೌಡರ್, 500 ಮಿ.ಗ್ರಾಂ ಅಮೃತಬಳ್ಳಿ(ಮಂಗನ ಬಳ್ಳಿ/ಗುಡೂಚಿ) ಸತ್ವ, 1 ಗ್ರಾಂ ಜ್ಯೇಷ್ಠಮಧು(ಮೂಲಿಠಿ) ಹಾಕಿ ಚೆನ್ನಾಗಿ ಕುದಿಸಿ. ಈ ಕಷಾಯವನ್ನು ಬೆಳಗ್ಗೆ ಮತ್ತು ಸಾಯಂಕಾಲ ಅರ್ಧ ಲೋಟ ಕುಡಿದರೆ ನಿಮ್ಮೊಳಗೆ ರೋಗ ಪ್ರತಿರೋಧಕ ಶಕ್ತಿ ಹೆಚ್ಚುವುದಷ್ಟೇ ಅಲ್ಲ, ಈ ವೈರಸ್ ಕೂಡಾ ನಾಶವಾಗತ್ತೆ. ಪ್ರತೀ ದಿನ ಇದನ್ನ ಸೇವಿಸಿದರೆ ನಿಮಗೆ ಯಾವುದೇ ವೈರಸ್ ಸೋಂಕು ಆಗಲಾರದು.

ಸರಿತಾ ವಿಹಾರ್‌ದಲ್ಲಿರುವ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಆಯುರ್ವೇದ, ಚೌಧರಿ ಬ್ರಹ್ಮಚಾರಿ ಹಾಸ್ಪಿಟಲ್ ಇಂಥಲ್ಲೆಲ್ಲಾ ಈ ಕಷಾಯ ಕೊಟ್ಟಿದಾರೆ. ಒಳ್ಳೆಯ ಫಲಿತಾಂಶ ಬರ್ತಾ ಇದೆ. ಈಗ ನಮ್ಮ ಗುರಿ ಮತ್ತು ಜವಾಬ್ದಾರಿ ಯಾರಿಗೆ ಕೊವಿಡ್ ಸೋಂಕು ತಗುಲಿಲ್ವೋ ಅವರಿಗೆ ಈ ರೋಗ ಬಾರದೇ ಇರೋ ಹಾಗೆ ನೋಡ್ಕೊಳ್ಳೋದು. ಸರಕಾರದ ಬೆಂಬಲ ಇದೆ. ನಾನು ಸುಮಾರು 2000 ಜನರಿಗೆ ಕಷಾಯ ಒಂದೇ ಅಲ್ಲ, ಇನ್ನೂ ಬೇರೆ ಬೇರೆ ಥರದ ಔಷಧ ಇದೆ ಅವನ್ನ ಕೊಟ್ಟಿದೀನಿ. ಸರಕಾರ ಕೂಡ ನಮ್ಮ ಸಲಹೆಗಳನ್ನು ಸ್ವೀಕಾರ ಮಾಡಿದೆ ಅಷ್ಟೇ ಅಲ್ಲ ಅನುಷ್ಠಾನ ಕೂಡಾ ಮಾಡ್ತಾ ಇದೆ. ನಮ್ಮ ದೇಶದಲ್ಲಿ ಆರೋಗ್ಯ ಸೇವಾಸೌಕರ್ಯಗಳ ಕೊರತೆ ಇದೆ. ಜೊತೆಗೇ ಜನರಲ್ಲಿ ಸೋಷಿಯಲ್ ಅವೇರ್‌ನೆಸ್ ಇಲ್ಲ. ಹೀಗಾಗಿ ಈ ರೋಗ ದಿನದಿಂದ ದಿನಕ್ಕೆ ಹೆಚ್ಚಾಗ್ತಾ ಇದೆ.

**ಸಂತೋಷ್ : ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಈ ರೋಗದ ಜೊತೆಗೇ ಜೀವನ ಮಾಡೋದನ್ನು ಜನರು ಕಲಿಯಬೇಕಾಗತ್ತೆ. ಆದರೆ ನಿಮ್ಮ ಪ್ರಕಾರ ಈ ರೋಗ ಸಂಪೂರ್ಣವಾಗಿ ನಿರ್ಮೂಲನೆ ಆಗೋದಕ್ಕೆ ಎಷ್ಟು ಸಮಯ ತಗುಲಬಹುದು? ಅಥವಾ ಅದು ಸಾಧ್ಯನೇ ಇಲ್ವಾ?**

**ಡಾ. ಭಟ್ :** ಕೊವಿಡ್ 19 ದಾಳ ಮಾಡೋದು ನಮ್ಮ ಶ್ವಾಸಕೋಶಕ್ಕೆ. ಅಲ್ಲಿ ಕಫ ಉತ್ಪತ್ತಿಯಾಗಿ ನಮ್ಮ ಶರೀರಕ್ಕೆ ಆಮ್ಲಜನಕ ಪೂರೈಕೆ ಆಗದೇ ಇರೋ ಹಾಗೆ ಮಾಡತ್ತೆ. ಬೇರೆ ರೋಗಗಳೆಲ್ಲಾ ಬೇರೆ ಬೇರೆ ಅಂಗಗಳಿಗೆ ಬಂದರೂ ನಮ್ಮ ಶರೀರಕ್ಕೆ ಪರ್ಯಾಯ ವ್ಯವಸ್ಥೆ ಮಾಡಬಹುದು. ಆದರೆ ಆಮ್ಲಜನಕ ಪೂರೈಕೆಯನ್ನೇ ತಡೆಯುವ ಈ ವೈರಸ್ಸನ್ನ ಎಲ್ಲಿಯವರೆಗೆ ನಾವು ನಮ್ಮ ಆಹಾರ ಶೈಲಿಯನ್ನು ಬದಲಾಯಿಸಿಕೊಳ್ಳೋದಿಲ್ವೋ, ಆರೋಗ್ಯ ಶಿಸ್ತನ್ನು, ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳೋದಿಲ್ವೋ ಅಲ್ಲಿಯವರೆಗೆ ನಿರ್ಮೂಲನೆ ಮಾಡೋದು ಅಸಾಧ್ಯ. ಸಮಾಜಕ್ಕೆ ಒಂದು ದೃಢ ಸಂಕಲ್ಪ ಬೇಕು ಅಂದ್ರೆ ಮಾತ್ರ ಇದನ್ನು ಅಳಿಸೋದಕ್ಕೆ ಸಾಧ್ಯ.

**ಸಂತೋಷ್ : ಕೊಟ್ಟಕೊನೆಯದಾಗಿ ಜನರಿಗೆ ನಿಮ್ಮ ಕಿವಿಮಾತು?**

**ಡಾ. ಭಟ್ :** ಒಂದು ಮಹತ್ವದ ಕಿವಿಮಾತು : **ಒಂದು ಲೀಟರ್ ನೀರು ತಗೊಳಿ, ಅದರಲ್ಲಿ 10 ಗ್ರಾಂ ಬಡೇಸೊಪ್ಪು(ಸೋಂಫ್) ಪೌಡರ್, 10 ಗ್ರಾಂ ಜೀರಿಗೆ ಪೌಡರ್, ಕೊತ್ತಂಬರಿ ಬೀಜದ ಪೌಡರ್ 10 ಗ್ರಾಂ, ಜ್ಯೇಷ್ಠಮಧು ಪೌಡರ್ 10 ಗ್ರಾಂ, ಒಣ ಶುಂಠಿ ಪೌಡರ್ 5 ಗ್ರಾಂ, ತುಳಸಿ ಎಲೆ ಪೌಡರ್ 5 ಗ್ರಾಂ ಹಾಕಿ, 5–10 ನಿಮಿಷ ಕುದಿಸಿ ಫ್ಲಾಸ್ಕ್‌ನಲ್ಲಿ ಹಾಕಿಡಿ.** ಬಾಯಾರಿಕೆ ಆದಾಗಲೆಲ್ಲಾ ಈ ನೀರನ್ನ ಕಾಲು / ಅರ್ಧ ಲೋಟ ಕುಡಿಯಿರಿ. ನಿಮಗೆ ಬಾಡಿ ರೆಸಿಸ್ಟೆನ್ಸ್ ಬರುತ್ತೆ, ಕೊರೋನಾ ವೈರಸ್ ನಿಮ್ಮ ಹತ್ತಿರ ಸುಳಿಯೊಲ್ಲ.




ದೆಹಲಿ ಕರ್ನಾಟಕ ಸಂಘದ
ಸುಸಜ್ಜಿತವಾದ ಆರ್ಟ್ ಗ್ಯಾಲರಿ
ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.
ಹೆಚ್ಚಿನ ಮಾಹಿತಿಗಾಗಿ
ದೆಹಲಿ ಕರ್ನಾಟಕ ಸಂಘದ
ಕಾರ್ಯಾಲಯವನ್ನು ಸಂಪರ್ಕಿಸಿರಿ.
ದೂರವಾಣಿ :
011–26109615 / 26104818

# ಶಾಮಣ್ಣ ಕೇವಲ ಒಂದು ನೆನಪಲ್ಲ, ನಿತ್ಯ ಜೀವನದ ಹೊಳಪು...

ನನಗೆ ರಾಮನಾಥಪುರದ ಶಂಕರನಾರಾಯಣರ ಪುತ್ರ ಶಾಮಸುಂದರ ಆಲಿಯಾಸ್ ಶಾಮಣ್ಣನ ಪರಿಚಯ ಆಗಿದ್ದು ಒಂದು ಸಭೆಯಲ್ಲಿ. ಅದೊಂದು ದಿನ ದೆಹಲಿ ಪೋಲಿಸ್ ಕಲ್ಯಾಣ ಸಮಿತಿಯು ಹೊಸದಾಗಿ ಜನ್ಮ ತಳೆದು ಸಭೆ ಸೇರಿತ್ತು. ನಾನೂ ಸಹ ಮೊದಲ ಬಾರಿಗೆ ಹೋಗಿದ್ದೆ. ಸಭೆ ಅತ್ಯಂತ ಬಿಲಿಷ್ಠವಾಗಿತ್ತು. ಆದರೆ ಅಲ್ಲಿನ ವಾತಾವರಣ ಯಾಕೋ ಅರ್ಥ ಕಳೆದುಕೊಂಡು ಕಳಪೆಯಾಗುತ್ತಿದೆ ಅನಿಸಿತು. ಎಲ್ಲರ ಮಾತುಗಳ ಕೊನೆಯಲ್ಲಿ ನಾನು ನನ್ನ ಸಾಮಾನ್ಯ ವಿಚಾರವನ್ನಿಟ್ಟೆ. ಆ ದಿನ ಸಭೆಯಲ್ಲಿ ನನ್ನ ಆ ವಿಚಾರ ಗಹನವಾದ ಪರಿಣಾಮ ಬೀರುತ್ತದೆಂದು ಗೊತ್ತಿರಲಿಲ್ಲ. ಸಭೆಯ ನಂತರ ಎಲ್ಲಾ ಹಿರಿಯರು ನನ್ನನ್ನು "ನೀನು ಅವನೇ" "ಅವನಂತೆ ಮಾತನಾಡುವೆ" ಅನ್ನುತ್ತಿದ್ದರು. ಈ ಅವನು ಯಾರೆಂದು ಕೇಳಿದಾಗ "ಶಾಮಸುಂದರ" ಅಂದರು. ಅಂದು ಆ ಸಭೆಯಲ್ಲಿ ಅವರಿರಲಿಲ್ಲ. ಯಾರೋ ಶ್ಯಾಮನಂತೆ ನನಗೇನು ನಾನು, ನನ್ನ ವಿಚಾರ ಉತ್ಕೃಷ್ಟ ಎನ್ನುವ ಅಹಂ ಅಥವಾ ಸ್ವಾಭಿಮಾನ ನನ್ನಲ್ಲಿತ್ತು.

ಮುಂದೊಂದು ದಿನ ಸಭೆಯಲ್ಲಿ ಆರು ಅಡಿ ಎತ್ತರದ ವ್ಯಕ್ತಿ, ಬಿಳಿಯ ಪೈಕಟ್ಟು, ಏರು ದನಿಯ ವ್ಯಕ್ತಿಯ ವಾಗ್ಮಿತನಕ್ಕೆ ಎಲ್ಲರೂ ತಲೆತೂಗಿದರು. ಆಗ ಪಕ್ಕದಲ್ಲಿದ್ದ ಸೀನಿಯರ್ ಒಬ್ಬರು ಹೇಳಿದರು ಇವನೇ "ಶ್ಯಾಮ" ಎಂದು. ಓಹೋ ಇವರೇನಾ??? ನಂತರ ಪರಿಚಯವಾಯಿತು, ಸ್ನೇಹವಾಯಿತು.

ಶಾಮಣ್ಣನನ್ನು ಹತ್ತಿರದಿಂದ ಕಂಡವರಲ್ಲಿ ನಾನೂ ಒಬ್ಬ. ನೇರನುಡಿ, ಉತ್ತಮ ವಾಗ್ಮಿ,

> ದೆಹಲಿಯ ರಂಗ ಚಟುವಟಿಕೆಯಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡು ತನ್ನ ಅಭಿನಯದಿಂದ ಮೆಚ್ಚುಗೆ ಪಡೆದಿದ್ದ ಆರ್.ಎಸ್. ಶ್ಯಾಮಸುಂದರ್ ಕಳೆದ ತಿಂಗಳು ವಿಧಿವಶರಾಗಿದ್ದರು. ಅವರೊಂದಿಗಿನ ಒಡನಾಟವನ್ನು ಗೆಳೆಯ ಡಿ.ಎ. ಶ್ರೀನಿವಾಸ ಮೂರ್ತಿ ಆಪ್ತವಾಗಿ ಇಲ್ಲಿ ಹಂಚಿಕೊಂಡಿದ್ದಾರೆ.
>
> **–ಸಂಪಾದಕ**

ಆತ್ಮವಿಶ್ವಾಸಿ, ಧೈರ್ಯವಂತ, ಬಹುಮುಖ ಪ್ರತಿಭೆ, ಕೋಪಿಷ್ಟ, ಅಂದುಕೊಂಡಿದ್ದನ್ನು ಸಾಧಿಸಬೇಕೆನ್ನುವ ಛಲಗಾರ, ಸಾಮಾನ್ಯ ದಾರಿಗೆ ಹೋಗದೆ, ಹೊಸತನ–ಹೊಸದಾರಿ ಹುಡುಕುವ ಅನ್ವೇಷಕ. ಹೀಗೆ ಬರೀತಾ ಹೋದ್ರೆ ಒಂದು ಪುಸ್ತಕವನ್ನು ಬರೆಯುವಷ್ಟು ವಿಷಯಗಳಿವೆ ಶಾಮಣ್ಣನ ಬಗ್ಗೆ.

ಶಾಮಣ್ಣ ಸದಾ ಸ್ನೇಹಮುಖಿ. ಸದಾ ಸ್ನೇಹಿತರ ಗುಂಪಿನಲ್ಲಿದ್ದ ಸ್ನೇಹಜೀವಿ. ಆದರೆ ಶಾಮಣ್ಣನ ಕೆಲವು ನೇರ ಹಾಗೂ ಸ್ಪಷ್ಟ ಮಾತುಗಳು ಸ್ನೇಹಿತರಿಗೆ ಚುಚ್ಚುತ್ತಿದ್ದವು. ಅದರಿಂದ ಸ್ನೇಹಿತರು ದೂರಾಗುತ್ತಿದ್ದರು. ಈ ಒಂದು ವಿಷಯದಲ್ಲಿ ಶಾಮಣ್ಣ ಕೊನೆಯವರೆಗೂ ರಾಜಿಯಾಗಲೇ ಇಲ್ಲ. ಎಲ್ಲಾ ವಿದ್ವತ್ತನ್ನು ಕರತಲಾಮಲಕ ಮಾಡಿ ಕುಡಿದಿದ್ದ ಶಾಮಣ್ಣ ಇಲ್ಲಿ ಎಡವಿದರೇನೋ ಎನಿಸುತ್ತಿದೆ. ಅದರ ಬಗ್ಗೆ ಅವರೆದೆಯಲ್ಲಿ ಎಲ್ಲೋ ನೋವಿರುವುದು ನನಗೆ ಸ್ಪಷ್ಟವಾಗಿ ಗೋಚರವಾಗುತ್ತಿತ್ತು.

ಕನ್ನಡ ಶಾಲೆಯಲ್ಲಿ ನಡೆದ ಒಂದು ಕೆಟ್ಟ ಘಟನೆಯಲ್ಲಿ ನನ್ನ ಜೊತೆ ಕೊಟ್ಟ ಸ್ನೇಹಿತರಲ್ಲಿ ಶಾಮಣ್ಣ ಪ್ರಮುಖ ವ್ಯಕ್ತಿ. ಬಹುಶಃ ಶಾಮಣ್ಣ ನನ್ನ ಆಪತ್ಬಾಂಧವ ಎಂದರೆ ಅತಿಶಯೋಕ್ತಿಯಾಗಲಾರದು.

ನಾಟಕಗಳ ಜನಕರು : ಅದೊಂದು ದಿನ ಶಾಮಣ್ಣನ ಮನೆಯಲ್ಲಿ ನಾವಿಬ್ಬರು ಗಳಸ್ಯ–ಕಂಠಸ್ಯರಾಗಿದ್ದೆವು. ಎರಡು ಒಮ್ಮೆ ಅವರ ಶ್ರೀಮತಿ ಆಶಾ ಶ್ಯಾಮಸುಂದರ್ ದೆಹಲಿ ಕರ್ನಾಟಕ ಸಂಘದಲ್ಲಿ ನಾಟಕ ಸ್ಪರ್ಧೆ ಇದೆ, ನೀವಿಬ್ಬರೂ ಸೇರಿ ಒಂದು ನಾಟಕ ಮಾಡಿ ಅಂತ ಬಂದು ಹುಳ ಬಿಟ್ಟರು. ನಾವದಕ್ಕೆ ನಮ್ಮಿಬ್ಬರಿಂದ ಮಾತ್ರ ನಾಟಕ ಮಾಡಲು ಸಾಧ್ಯವಿಲ್ಲಾಂತ ಪೂರ್ಣವಿರಾಮವಿಟ್ಟೆ. ಮೂರನೇ ಪೆಗ್ ಹಾಕುತ್ತಾ ಶಾಮಣ್ಣ "ನಾಟಕ ಮಾಡೋಣ ಕಣ್ಲೆ" ಎಂದು ಗತ್ತಿನಿಂದ ಆದೇಶ. "ಯಂಗಪ್ಪ, ಸ್ಕ್ರಿಪ್ಟ್ ಇಲ್ಲಾ, ಕಥೆ ಇಲ್ಲ, ಸ್ಟೇಜ್ ಪರಿಕರಗಳಿಲ್ಲ ಎಲ್ಲಾದಕ್ಕೂ ಹೆಚ್ಚಾಗಿ ಸಮಯವಿಲ್ಲಾಂದೆ". ತಕ್ಷಣ ಅವರ ಶ್ರೀಮತಿ ಕಥೆ ತಾನೇ ಎಷ್ಟು ಬೇಕೂಂತ ನಾಟಕದ 10 ಪುಸ್ತಕಗಳನ್ನಿಟ್ಟರು. ಎಲ್ಲವನ್ನೂ ವೀಕ್ಷಿಸಿದ ಮೇಲೆ ಬೇರೊಬ್ಬರು ಬರೆದ ನಾಟಕ ನಾವು ಏಕೆ ಮಾಡ್ಬೇಕು ನಮ್ಮದೇ ಆದ ಒಂದು ನಾಟಕವನ್ನು ನಮ್ಮ ಡಿಪಾರ್ಟ್‌ಮೆಂಟ್‌ನ ಕಷ್ಟ–ಸುಖ, ನೋವು–ನಲಿವಿನ ಬಗ್ಗೆ ಹೊಸದೊಂದು ಮಗುವಿಗೆ ಜನ್ಮಕೊಟ್ಟರೆ ಹೇಗೆಂದು ಧನಾತ್ಮಕ ಸಲಹೆಯೊಂದನಿಟ್ಟೆ. ಈಗಾಗಲೇ ತಿಳಿಸಿದಂತೆ ಹೊಸತವಕ ಅನ್ವೇಷಕ ಶಾಮಣ್ಣನಿಗೆ ಇದು ಸರಿಯೆನಿಸಿತು. ತಕ್ಷಣ ಒಪ್ಪಿ "ನಾಟಕ ಬರಿಯೋ" ಎಂದರು. "ನಾನಾ" ಎಂದೆ ಹೌದು "ನೀನೇ" ಎಂದು ಆದೇಶಿಸಿದ್ದರು. ಅದುವರೆಗೂ ಶಾಲಾ–ಕಾಲೇಜುಗಳಲ್ಲಿ ಪ್ರಬಂಧ ಬರೆದು ಪ್ರಥಮ ಪ್ರಶಸ್ತಿ ಪಡೆಯುತ್ತಿದ್ದ ನನಗೆ ನಾಟಕ, ಸಂಭಾಷಣೆ, ನಿರೂಪಣೆಯನ್ನು ಹೇಗೆ ಬರೆಯಬೇಕೆಂದು ಹೊಸದಾಗಿ ಕಲಿಸಿಕೊಟ್ಟ ಗುರು ನನ್ನ ಶಾಮಣ್ಣ. ಶಾಮಣ್ಣ ಅಂದೇ ನಾಟಕ ಪರಿಪೂರ್ಣವಾಗಬೇಕೆಂದು ಒಂದು ಕ್ರೇಟ್ ಬೀರ್ ತಂದ. ನಾಟಕ ಗರ್ಭ ಧರಿಸಲು ಪ್ರಾರಂಭವಾಯಿತು.

ನಾಟಕದ ಚರಣ ರೂಪು–ರೇಷೆಗಳು ತಯಾರಾಯಿತು. ಆದರೆ ನಾಟಕದ ಒಂದು ಚಿಕ್ಕ ಬಿಂದುವಿನಲ್ಲಿ ನನಗೂ ಶಾಮಣ್ಣನಿಗೂ ಜಗಳ ಶುರುವಾಯಿತು. "ಎತ್ತು ಏರಿಗೆಳೆದರೆ



**'ನಾ ಸತ್ತಿಲ್ಲ' ನಾಟಕದ ದೃಶ್ಯ. ಆರ್.ಎಸ್. ಶ್ಯಾಮ್‌ಸುಂದರ್, ಶಿವಾನಂದ ಇಂಗಳೇಶ್ವರ್, ಡಿ.ಎ. ಶ್ರೀನಿವಾಸ ಮೂರ್ತಿ, ಟಿ.ಎಸ್. ರಮೇಶ್ ಮತ್ತು ರವಿಕುಮಾರ್.**

ಎಮ್ಮೆ ನೀರಿಗೆಳೆಯಿತು" ಅನ್ನುವಂತಾಯಿತು. ನಾನೊಂದು ಹೇಳಿದರೆ ಶಾಮಣ್ಣ ಬೇರೊಂದು ಹೇಳೋದು. ಒಂದು ಕ್ರೇಟ್ ಬೀರ್ ಖಾಲಿ ಆಯಿತು, ನಾಟಕ ಮುಂದುವರೆಯಲಿಲ್ಲ, ಮಧ್ಯರಾತ್ರಿಯಾಯಿತು ಯಾರೂ ಸುತಾರಾಂ ಒಪ್ಪಲು ತಯಾರಿಲ್ಲ. ಗರ್ಭ ಅರ್ಧಕ್ಕೆ ನಿಂತಿತು. ನಾನೂ ಕೋಪದಿಂದ ಮನೆಗೆ ಹಿಂದಿರುಗಿದೆ.

ಮೂರನೆಯ ದಿನ ಮಧ್ಯಾಹ್ನ ಶಾಮಣ್ಣನ ದೂರವಾಣಿ ಕರೆ ಬಂತು "ಎಲ್ಲಿ ಸಾಯ್ತಿದ್ದೀಯೋ" ಅಂಥ "ನಾನ್ಯಕೆ ಸಾಯ್ಲಿ ಸಾವು ಬಂದೋರು ಸಾಯ್ತಾರೆ" ಅಂದೆ ಮುಖ ಊದಿಸಿಕೊಂಡು. "ಸರಿ ಎಲ್ಲಿದ್ದೀಯಾ ಸರಿಯಾಗಿ ಹೇಳು", "ನಿಮ್ಮ ಮನೆ ಪಕ್ಕದ ಪಾರ್ಕಲಿ ಅಂದೆ". ಜೋರಾಗಿ ನಕ್ಕು ಶಾಮಣ್ಣ, ಬೇಗ ಮನೆಗೆ ಬಾ ನಂಗೊತ್ತಿತ್ತು. ಎಣ್ಣೆ ತರ್ತೀನೀ ಅಂದ. ನಾನು ಅವರ ಮನೆಗೆ ಬರುವಷ್ಟರಲ್ಲಿ ಎಣ್ಣೆ ತಂದಿದ್ದ. ಇದು ಶಾಮಣ್ಣನ ಅಕ್ಕರೆ, ಪ್ರೀತಿಯನ್ನು ಬಿಂಬಿಸುತ್ತದೆ. ಸರಿ ನಾನೇ ರಾಜಿ ಆದೆ. ಶಾಮಣ್ಣನಂತೆ ಕಥೆ ಮುಂದುವರಿಯಿತು. ಕಥೆ–ಸಂಭಾಷಣೆ–ನಿರೂಪಣೆ ಪೂರ್ತಿಯಾಯಿತು. ಇನ್ನು ನಿರ್ದೇಶಕರ ಹುಡುಕಾಟ ಶಿವಾನಂದ ಇಂಗಳೇಶ್ವರರನ್ನು ಕರೆದು ನಾಟಕದ ಕಥೆ ಹೇಗಿದೆಯೆಂದು ಕೇಳಲು, ಮೊದಲ ಪ್ರಯತ್ನ ತುಂಬಾ ಚೆನ್ನಾಗಿದೆಯೆಂದರು. ನಿರ್ದೇಶನಕ್ಕೆ ಕೇಳಲು ಅವರು ಸ್ಪರ್ಧಾತ್ಮಕ ನಾಟಕಗಳಿಗೆ ನಾನು ನಿರ್ದೇಶಿಸುವುದಿಲ್ಲ ಎಮದು ಕಡ್ಡಿ ತುಂಡಾಗುವಂತೆ ಹೇಳಿದರು. ನಾಟಕಕ್ಕೆ ನಾಮಕರಣ ಮಾಡಲು ಹೇಳಿದಾಗ ನಮ್ಮ ಮೊದಲನೇ ಶಿಶುವಿಗೆ "ಸತ್ಯ–ಮಿಥ್ಯ" ಎಂದು ನಾಮಕರಣ ಮಾಡಿದರು. ನಿರ್ದೇಶನಕ್ಕೆ ಶಾಮಣ್ಣ ನಾವಿಬ್ಬರು ಅನುಭವವಿಲ್ಲದೆ ಬರೆದ ನಾಟಕ ನಿರ್ದೇಶಕರು ಅನುಭವವಿಲ್ಲದವರೇ ಆಗಲೆಂದು ನಮ್ಮ ಜೀವನವನ್ನೇ ನಿರ್ದೇಶಿಸಿ ನಡೆಸುತ್ತಿರುವ ನಮ್ಮಿಬ್ಬರ ಹೆಂಡತಿಯರಾದ ಆಶಾ ಶ್ಯಾಮಸುಂದರ್ ಹಾಗೂ ಯೋಗಿತಾ ಮೂರ್ತಿಗೆ ವಹಿಸಿದರು. ಈ ನಾಟಕ ಸ್ಪರ್ಧೆಯಲ್ಲಿ ಅತ್ಯುತ್ತಮ ನಿರ್ದೇಶಕರ ಪ್ರಶಸ್ತಿ ಪಡೆಯಿತು. ಹೀಗೆ ನಮ್ಮ ನಾಟಕದ ಮೊದಲ ಪ್ರಸವವಾಯಿತು.

ಆನಂತರ ನಾನು, ಶಾಮಣ್ಣ ಹಲವಾರು ನಾಟಕಗಳನ್ನು ಮಾಡಿದೆವು. ಕುಂ. ವೀರಭದ್ರಪ್ಪನವರ 'ಬಸ್ಸು ಕೋಡ್ ಬಸ್ಸು' ನಾಟಕದಲ್ಲಿ ಶಾಮಣ್ಣನಿಗೆ ಗಯ್ಯಾಳಿ ಹೆಣ್ಣಿನ ಪತ್ರ ಮಾಡಲು ಕಾರಣ ನಾನೆಂದರೆ ತಪ್ಪಲ್ಲ. ಕಾರಣ ಈ ಹಿಂದೆ ನಾನು "ಶ್ರೀಕೃಷ್ಣ ಸಂಧಾನ" ನಾಟಕದಲ್ಲಿ "ಕೆಂಪಣ್ಣ"ನಾಗಿ ಶಿಖಂಡಿಯ ಪಾತ್ರ ವಹಿಸಿದ್ದೆ. ಅದು ಇಂದಿಗೂ ಜನರ ಮನದಲ್ಲಿ ಮನೆ ಮಾಡಿದೆ. ಅದನ್ನು ಕಂಡ ಶಾಮಣ್ಣ "ಗಯ್ಯಾಳಿ ಹೆಣ್ಣಿ"ನ ಪಾತ್ರ ಮಾಡಲು ತಯಾರಾದರು.

ತದನಂತರ ಕೃಷ್ಣಮೂರ್ತಿ ಕವತ್ತಾರರ ಗರಡಿಯಲ್ಲಿ "ಕೊಳ್ಳಿ" ಯಶಸ್ವಿ ನಾಟಕವನ್ನು ಕೊಟ್ಟೆವು.

ಗುರುಗಳಾದ ಇಂಗಳೇಶ್ವರರ ಪಾಳೆಯದಲ್ಲಿ 'ನಾ ಸತ್ತಿಲ್ಲ' ನಾಟಕದಲ್ಲಿ ಹಿರಿಯಣ್ಣನ ಪಾತ್ರ ಮಾಡಿದ ಶಾಮಣ್ಣ ನಿಜವಾಗಿಯೇ ಮನ ಮುಟ್ಟುವಂತಿತ್ತು. ಈ ನಾಟಕವನ್ನು ದೆಹಲಿಯಿಂದ



ಆರ್.ಎಸ್. ಶ್ಯಾಮ್‌ಸುಂದರ್

ಕರ್ನಾಟಕದಾದ್ಯಂತ ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಹಲವಾರು ಯಶಸ್ವಿ ಪ್ರದರ್ಶನಗಳು ಕಂಡವು. ಶಾಮಣ್ಣ ದಂಪತಿಗಳ ಕೊಡುಗೆ ಈ ನಾಟಕಕ್ಕೆ ಅಪಾರ.

ಶಾಮಣ್ಣ ದೆಹಲಿ ಕನ್ನಡಿಗರು ಕಂಡ ಅದ್ಭುತ ಕಲಾವಿದ.

ಜೀವನದಲ್ಲಿ ಬಹಳಷ್ಟು ವಿಷಯಗಳನ್ನು ಶಾಮಣ್ಣನಿಂದ ಅಳವಡಿಸಿಕೊಂಡಿದ್ದೇನೆ. ನನ್ನ ಬಳಿ ಯಾವುದೇ ವಾಹನವಿಲ್ಲದಾಗ ದ್ವಿಚಕ್ರ ವಾಹನ ತೆಗೆದುಕೊಳ್ಳಲು ಪ್ರೇರೇಪಿಸಿದ್ದೂ ಅವರೇ. ನಾನು ನನ್ನ ಮೊದಲ ಕಾರು ತೆಗೆದುಕೊಂಡಾಗ ಮೊಟ್ಟ ಮೊದಲು ಶಾಮಣ್ಣನ ಮನೆಗೆ ಸಿಹಿ ತೆಗೆದುಕೊಂಡು ಹೋಗಿದ್ದೆ. "ಮಗನೇ ಎಲ್ಲಿಂದ ಕೊಳ್ಳೇ ಹೊಡೆದ್ಯೋ" ಎಮದು ಕುಚೋದ್ಯ ಮಾಡಿದ್ದು ಈಗಲೂ ಕಣ್ಣಿಗೆ ಕಟ್ಟಿದಂತಿದೆ.

ಹಲವಾರು ದಿನಗಳಿಂದ ಶಾಮಣ್ಣನ ಜೊತೆ ವೈಚಾರಿಕ ವಿರೋಧಾಭಾಸದಿಂದ ನಾನು ಮಾತನಾಡುತ್ತಿರಲಿಲ್ಲ. ಅವರು ಧೈವಾಧೀನರಾಗುವ ಹಿಂದಿನ ದಿನ ನಾನು ನನ್ನ ಪತ್ನಿ ಆಸ್ಪತ್ರೆಯಲ್ಲಿದ್ದು ತುಂಬಾ ನೆನಪಿಸಿಕೊಂಡೆವು. ಅವರ ಕುಟುಂಬದ ಜೊತೆ ಕಳೆದ ಉತ್ತಮ ಕ್ಷಣಗಳನ್ನು ಮೆಲುಕು ಹಾಕಿದೆವು. ನನ್ನ ಪತ್ನಿ ಶಾಮಣ್ಣನ ಹತ್ತಿರ ಆರೋಗ್ಯ ವಿಚಾರಿಸಲು ಮಾತನಾಡಲು ಹೇಳಿದಳು. ರಾತ್ರಿಯಾಗಿದೆ ಮುಂಜಾನೆ ಮಾಡುವೆ ಎಂದಿದ್ದೆ. ಆದರೆ ಆ ಮುಂಜಾನೆಯ ಮಂಜು ನನ್ನ ಜೀವನದಲ್ಲಿ ಕರಗಲೇ ಇಲ್ಲ. ಶಾಮಣ್ಣನ ಜೀವ ಜ್ಯೋತಿಯು ರಾತ್ರಿಯೇ ನಂದಿಹೋಗಿತ್ತು.

ಜೀವನದಲ್ಲಿ ಯಾವುದೋ ಅಘೋಷಿತ ಅಪರಾಧ ಮಾಡಿದ ಅಪರಾಧಿಯ ಮನಸ್ಥಿತಿಯಾಗಿದೆ. ಎಲ್ಲರಲ್ಲೂ ಒಂದು ಸಣ್ಣ ಮಾತು. ನಾನು ಮಾಡಿದ ತಪ್ಪು ನೀವುಗಳು ಮಾಡಬೇಡಿ, ನಿಮ್ಮ ಸ್ನೇಹಿತರು, ಸಂಬಂಧಿಕರು, ಹಿತೈಷಿಗಳ ನಡುವೆ ಯಾವುದೇ ಮನಸ್ತಾಪವಿದ್ದರೂ ಆಗಾಗ ಒಮ್ಮೆಯಾದರೂ ಮಾತನಾಡುತ್ತಿರಿ.

ಶಾಮಣ್ಣನ ಆತ್ಮಕ್ಕೆ ಭಗವಂತ ಶಾಂತಿ ನೀಡಲಿ ಹಾಗೂ ಅವರ ಕುಟುಂಬಕ್ಕೆ ಈ ದುಃಖ ಭರಿಸುವ ಶಕ್ತಿ ನೀಡಲೆಂದು ಪ್ರಾರ್ಥಿಸುವೆ.

***ಡಿ.ಎ. ಶ್ರೀನಿವಾಸ ಮೂರ್ತಿ***

## ನುಡಿನಮನ

# ಶ್ಯಾಮ್ ಜೊತೆಗಿನ ರಂಗ ಪಯಣ ಒಂದು ವಿಶೇಷ ಅನುಭವ

ಗಣೇಶ ಮಿತ್ರ ಮಂಡಳಿಯವರು ದೆಹಲಿ ಕರ್ನಾಟಕ ಸಂಘದಲ್ಲಿ ವರ್ಷ 2006ರಲ್ಲಿ ಆಯೋಜಿಸಿದ್ದ ನಾಟಕ ಸ್ಪರ್ಧೆಗೆ 'ಶ್ರೀಕೃಷ್ಣ ಸಂಧಾನ' ನಾಟಕ ಮಾಡುತ್ತಾ ಇದ್ದರು. ಆ ಸಂದರ್ಭದಲ್ಲಿ ಶ್ರೀ ಶ್ಯಾಮಸುಂದರ್ ಜೊತೆಗೆ ಇತರ ಗೆಳೆಯರ ಸಂಪರ್ಕ ಶುರುವಾಯಿತು. ನಂತರದ ವರ್ಷದಲ್ಲಿ ಶ್ಯಾಮಸುಂದರ್, ಡಿ.ಎ. ಶ್ರೀನಿವಾಸ ಮೂರ್ತಿ, ಎಸ್. ಕುಮಾರ್, ಸಂತೋಷ್ ಕುಮಾರ್ ಉಪಾಧ್ಯಾಯ, ಮಲ್ಲನ ಗೌಡ ಹೀಗೆ ಕೆಲ ಗೆಳೆಯರು ಸೇರಿ ದೆಹಲಿ ಕರ್ನಾಟಕ ಸಂಘದ ವರ್ಷ 2009ರ ನಾಟಕ ಸ್ಪರ್ಧೆಗಾಗಿ ತಮ್ಮದೇ ತಂಡ ಕಟ್ಟಿಕೊಂಡು 'ಸತ್ಯ ಮಿಥ್ಯ' ನಾಟಕದ ತಯಾರಿ ನಡೆಸಿದ್ರು. ಆಗ ಅವರು ನನ್ನಿಂದ ನಾಟಕ ಸಂಬಂಧಿ ಸಲಹೆ ಸೂಚನೆ ಕೇಳಿದ್ರು. ಅಲ್ಲಿಂದ ಹಾಗೆ ನಡೆದು ಶ್ರೀ ಕೃಷ್ಣಮೂರ್ತಿ ಕವತ್ತಾರ್ ಅವರು ರಂಗತರಬೇತಿ ಶಿಬಿರ (ವರ್ಷ 2007) ಒಟ್ಟಿಗೆ 'ಕೊಳ್ಳಿ' ನಾಟಕದಲ್ಲಿ ಭಾಗಿಯಾಗಿದ್ದು, ರಂಗಶಿಬಿರ ಪ್ರಾರಂಭಕ್ಕೂ ಮುಂಚೆ ದ.ರಾ. ಬೇಂದ್ರೆ ಅವರ 'ಸಾಯೋ ಆಟ' ನಾಟಕ ತಯಾರಿ ನಡೆದಿತ್ತು. ಅದರೆ ಅದು ರಂಗಕ್ಕೆ ಬರಲಿಲ್ಲ. ಕುಂ. ವೀರಭದ್ರಪ್ಪ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಸಂದರ್ಭದಲ್ಲಿ ಅವರ ಕಥೆಯಾಧಾರಿತ 'ಪಯಣ' ದಿನಕರ ತಂಡದಿಂದ ಶ್ರೀ ನಾರಾಯಣ ಸ್ವಾಮಿ ಅವರ ನಿರ್ದೇಶನದಲ್ಲಿ ರಂಗಕ್ಕೇರಿತ್ತು. ಅದರಲ್ಲಿ ಶ್ಯಾಮ್ ಕೂಡಾ ಒಬ್ಬರು. ಇದರಲ್ಲಿ ವಿಶೇಷ ಏನೆಂದರೆ ಈ ನಾಟಕದಲ್ಲಿ ಶ್ಯಾಮ್ ಸ್ತ್ರೀ ಪಾತ್ರ ವಹಿಸಿದ್ದು ಜನಮೆಚ್ಚುಗೆಗೆ ಪಾತ್ರವಾಯಿತು. ನಂತರ ದಿನಕರದ 'ನಾ ಸತ್ತಿಲ್ಲ' ನಾಟಕದಲ್ಲಿ ಶ್ಯಾಮ್ ಅವರ ಅಭಿನಯ ಶ್ಲಾಘನೀಯ. ಇದು 8–9 ಪ್ರಯೋಗಗಳನ್ನು ಕಂಡಿತು. ನಂತರ ಮಂಜುನಾಥ ಬೆಳಕೆರೆಯವರ ನಿರ್ದೇಶನದಲ್ಲಿ 'ಸೇವಂತಿ ಪ್ರಸಂಗ' ನಾಟಕದಲ್ಲಿ ಶ್ಯಾಮ್ ಅವರು ವಿಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಂಡರು (ವರ್ಷ 2015). ಮುಂದೆ ಅವರದೇ ಆದ ತಂಡ ಕಟ್ಟಿ 'ನಾಳೆ ಬಾ', ಮುದ್ದಣನ ಪ್ರಮೋಷನ್ ಪ್ರಸಂಗ' ಇತ್ಯಾದಿ ನಾಟಕಗಳನ್ನು ಅವರು ರಂಗಕ್ಕೆ ತಂದರು. ಅವರೊಂದಿಗಿನ ಆ ರಂಗ ಪಯಣ ಈಗ ನೆನಪು ಮಾತ್ರ.

***ಶಿವಾನಂದ ಇಂಗಳೇಶ್ವರ***

ಚಿಂತನೆ

# ಬದಲಾದ ಬದುಕು

ಶಪಿಸುವ ಕಾಲ ಕಳೆದು ಹೋಯಿತು. ಇನ್ನೇನಿದ್ದರೂ ನಮ್ಮನ್ನು ಒಂಟಿಯಾಗಿ ಬಿಡದೆ ಕಾಡುತ್ತಿರುವ ಅದರ ಜೊತೆ ಬದುಕಬೇಕಾದ ಅನಿವಾರ್ಯತೆ ನಮಗಿದೆ. ಹಾಗಂತ ಒಡನಾಟ, ಆತ್ಮೀಯತೆಯನ್ನು ಬೆಳೆಸದೆ ಒಂದಿಷ್ಟು ಅಂತರದೊಂದಿಗೆ ಸಾಗಬೇಕಿದೆ. ಹೌದು, ನಾನು ಹೇಳ ಹೊರಟಿರುವುದು ನಮ್ಮೊಳಗೆಯೇ ಸಾಮಾಜಿಕ ಅಂತರವನ್ನು ತಂದಂತಹ 'ಕೊರೊನಾ' ವೈರಸ್ ಕುರಿತಾಗಿ. ನಮ್ಮ ಪಾಡಿಗೆ ನಾವಿದ್ದರೂ ನಮ್ಮನ್ನು ಭಯಗೊಳಿಸುವಷ್ಟು ಭೀಕರತೆ ಅದಕ್ಕಿದೆ. ಮಾನವನ ಹುಚ್ಚು ಓಟಕ್ಕೆ ಕಡಿವಾಣ ಹಾಕಿದ ಈ ವೈರಸ್‌ಗೆ ಬಹಳ ಬೆಲೆ ತೆರುತ್ತಿದ್ದೇವೆ. ವಿಜ್ಞಾನ, ತಂತ್ರಜ್ಞಾನ, ಆಯುರ್ವೇದ, ಜ್ಯೋತಿಷ್ಯ ಎಲ್ಲವೂ ಮೌನವಾದಂತಿದೆ.

ಬದುಕು ನಿಂತ ನೀರಲ್ಲ. ಸದಾ ಹೊಸತನವನ್ನು ಹಂಬಲಿಸುತ್ತಾ ಹರಿವ ನದಿಯಂತೆ. ಬದಲಾವಣೆಯೇ ಅದರ ನಿಯಮ. ಆದರೆ ಕೆಲವೊಮ್ಮೆ ಯಾವುದೋ ನಿಯಂತ್ರಣಕ್ಕೆ, ನಿರ್ಬಂಧಕ್ಕೆ ಬದುಕು ಒಳಗಾಗುತ್ತದೆ. ಹಾಗೆಯೇ ಹೊಸತನವನ್ನು ಕುತೂಹಲದಿಂದ ಸ್ವೀಕರಿಸುವ ಹಳೆಯದ್ದನ್ನು ಸಂಶಯದಿಂದ ಕಾಣುವ ಮನಸ್ಥಿತಿ ಇಂದು ನಮ್ಮದಾಗಿದೆ. ಹಳೆ ಕಾಲದ ನಮ್ಮ ಸಂಪ್ರದಾಯಗಳಲ್ಲಿ ಹೊರಗಡೆ ಸುತ್ತಾಡಿ ಬಂದ ಮೇಲೆ ಕೈ ಕಾಲು, ಮುಖ ತೊಳೆದು ಮನೆಯನ್ನು ಪ್ರವೇಶಿಸುವುದು ಕೂಡ ಒಂದಾಗಿತ್ತು. ಮುಂದಿನ ದಿನಗಳಲ್ಲಿ ಇದನ್ನು ಕೆಲವರು ಮರೆತರು. ಕೆಲವರು ಮೂಢನಂಬಿಕೆ ಎಂದು ಗೋಗರೆದು ಅಸಡ್ಡೆ ತೋರಿದವರು, ಪರಸ್ಪರ ಭೇಟಿಯಾದಾಗ ಕೈ ಕುಲುಕದೆ ಕೈ ಜೋಡಿಸಿ ನಮಸ್ಕರಿಸಿದಾಗ ವ್ಯಂಗ್ಯ ನಗೆ ಬೀರಿದವರು ಈಗ ಮತ್ತೆ ಅದೇ ಸಂಪ್ರದಾಯಕ್ಕೆ ಶರಣಾಗುವ ಕಾಲ ಬಂದು ಬಿಟ್ಟಿತು!

ಕೆಲಸವಿದ್ದರೂ ಅಥವಾ ಇಲ್ಲದಿದ್ದರೂ ತಾನೇ ಮಾಡುವವನು, ಎಲ್ಲವೂ ತನ್ನಿಂದಲೇ, ತನಗೆ ಸಮಯವೇ ಇಲ್ಲ ಎಂದು ತಾನೋರ್ವ ಬಹಳ 'ಬ್ಯುಸಿ ಮನುಷ್ಯ' ಎಂದು ಬೀಗುತ್ತಿದ್ದವನ ಬಾಯಿಯಲ್ಲಿ ಇಂದು ಪದಗಳೇ ಉರುಳುತ್ತಿಲ್ಲ. ಸದಾ ಅಧಿಕಾರದ ಜಪದಲ್ಲಿ ತಮ್ಮ ಕೈಯಡಿ ಇರುವವರನ್ನು ಶೋಷಿಸುವವರು, ಒತ್ತಾಯದ ನೆಲೆಯಿಂದ ಸಿಗುವ ಗೌರವಗಳೆಲ್ಲವನ್ನು ಸ್ವೀಕರಿಸುವವರು ಇಂದು ಜನಸಾಮಾನ್ಯರಂತೆ ಬದುಕುತ್ತಿದ್ದಾರೆ. ಸ್ವರ್ಗದಲ್ಲಿ ಪೀಠಸ್ಥನಾಗಿದ್ದ ದೇವೇಂದ್ರನಂತೆ ಕಚೇರಿಯಲ್ಲಿ ತಮ್ಮ ಕೈ ಕೆಳಗಿರುವವರಿಂದ ಸೇವೆಯನ್ನು ಪಡೆದು, ಇತರರ ಮೇಲೆ ತಮ್ಮ ಅಧಿಕಾರವನ್ನು ಚಲಾಯಿಸುತ್ತಿದ್ದ ವ್ಯಕ್ತಿಗಳಿಗೆ ಈ ವೈರಸ್ ಪಾಠ ಕಲಿಸಿರಬಹುದು. ಆತನ ಹುದ್ದೆ, ಪದವಿಗಿಂತ ತಾನೋರ್ವ 'ಸಾಮಾನ್ಯ ವ್ಯಕ್ತಿ' ಎಂಬ ಅರಿವಾಗಿರಬಹುದು. ತಾನು ಮಾಡಬೇಕಾಗಿರುವ ಕೆಲಸವನ್ನು ತನ್ನದಲ್ಲದ ಕೈಗಳಿಂದ ಮಾಡಿಸಿಕೊಂಡು, ದೇಹದಲ್ಲಿ ಬೆಳೆದ ಬೊಜ್ಜನ್ನು ಕರಗಿಸಲು ಇದೀಗ ಯಾವ ಉದ್ಯಾನವನಗಳು ಯಾರನ್ನೂ ಕೈ ಚಾಚಿ ಕರೆಯುತ್ತಿಲ್ಲ.

‘ಸ್ವರ್ಗದಲ್ಲಿ ಪೀಠಸ್ಥನಾಗಿದ್ದ ದೇವೇಂದ್ರನಂತೆ ಕಚೇರಿಯಲ್ಲಿ ತಮ್ಮ ಕೈ ಕೆಳಗಿರುವವರಿಂದ ಸೇವೆಯನ್ನು ಪಡೆದು, ಇತರರ ಮೇಲೆ ತಮ್ಮ ಅಧಿಕಾರವನ್ನು ಚಲಾಯಿಸುತ್ತಿದ್ದ ವ್ಯಕ್ತಿಗಳಿಗೆ ಈ ವೈರಸ್ ಪಾಠ ಕಲಿಸಿರಬಹುದು. ಆತನ ಹುದ್ದೆ, ಪದವಿಗಿಂತ ತಾನೋರ್ವ 'ಸಾಮಾನ್ಯ ವ್ಯಕ್ತಿ' ಎಂಬ ಅರಿವಾಗಿರಬಹುದು. ತಾನು ಮಾಡಬೇಕಾಗಿರುವ ಕೆಲಸವನ್ನು ತನ್ನದಲ್ಲದ ಕೈಗಳಿಂದ ಮಾಡಿಸಿಕೊಂಡು, ದೇಹದಲ್ಲಿ ಬೆಳೆದ ಬೊಜ್ಜನ್ನು ಕರಗಿಸಲು ಇದೀಗ ಯಾವ ಉದ್ಯಾನವನಗಳು ಯಾರನ್ನೂ ಕೈ ಚಾಚಿ ಕರೆಯುತ್ತಿಲ್ಲ.’

ಧರ್ಮ, ದೇವರ ಮೇಲೆ ಬಲವಾದ ನಂಬಿಕೆಯಿದ್ದವರು ನಾವು. ವಾರದ ಏಳು ದಿನವೂ ದೈವ–ದೇವರೆಂದು ಮಂದಿರ, ಮಸೀದಿ, ಚರ್ಚ್‌ಗಳಿಗೆ ಸುತ್ತಾಡುವ ಮನಸ್ಸು ನಮ್ಮದು. ಆದರೆ ಈ ವೈರಸ್ ನಮ್ಮನ್ನು ಮನೆಯೊಳಗೆ, ದೇವರನ್ನು ಗುಡಿಯೊಳಗೆ ಬಂಧಿಯಾಗಿಸಿತ್ತು. ಹೊರಗೆ ಕಾಲಿಡದ ಮನಸ್ಸುಗಳಿಗೆ ಮನೆಯೇ ಮಂತ್ರಾಲಯವಾಯಿತು. ಈ ಸಂಕಷ್ಟದ ಸಂದರ್ಭದಲ್ಲಿ ನಾಲ್ಕು ಗೋಡೆಯ ಮಧ್ಯೆ ಕುಳಿತು ಟಿವಿ ಪರದೆಯ ಮೇಲೆ ಹೊರ ಜಗತ್ತನ್ನು ಕಾಣುತ್ತಿದ್ದ ನಾವುಗಳು ನಮ್ಮ ನಾಲಗೆಯಲ್ಲಿ ಅದೆಷ್ಟೋ ನಿರಾಸೆಯ ರಾಗವನ್ನು ಎಳೆದಿದ್ದೇವೆ. ಆದರೆ ಇಂತಹ ನಿರಾಸೆಯೊಳಗೂ ಆನಂದದ ಅಲೆಯಲ್ಲಿ ತೇಲಾಡಿದವರು ಎಳೆಯ ಕಂದಮ್ಮಗಳು. ಹೌದು ಇಂತಹ ಸಂದರ್ಭದಲ್ಲಿ ಎಳೆಯ ಮಕ್ಕಳು ತಾಯಿತಂದೆಯ ತೋಳತೆಕ್ಕೆಯಲ್ಲಿ ಪ್ರೀತಿಯ ಸವಿಯನ್ನು ಪೂರ್ಣವಾಗಿ ಅನುಭವಿಸಿದರು. ಆದರೆ ಯುವ ಹೃದಯಗಳು ಜೋಡಿಯಾಗಿ ಹಸೆಮಣೆ ಏರಿ ಸಪ್ತಪದಿ ತುಳಿದು ಮದುವೆಯಾಗಿ ನಲ್ಲನಲ್ಲೆಯ ಜೊತೆ ಸಂಭ್ರಮದ ಕನಸಿನ ದೋಣಿಯಲ್ಲಿ ತೇಲಾಡುತ್ತಿದ್ದ ವಧುವರರ ಶಾಪ ಮಾತ್ರ ಈ ವೈರಸ್‌ಗೆ ಜೋರಾಗಿ ತಟ್ಟಿರಬಹುದು!

ಮನೆ ಕೆಲಸದ ಬಗ್ಗೆ ಅರಿವಿಲ್ಲದೆ, ಅಸಡ್ಡೆ ತೋರುತ್ತಿದ್ದವರು ಮನೆಯೊಳಗೆ ಮುಗಿಯದಷ್ಟು ಕೆಲಸಗಳಿವೆ ಎಂಬುವುದು ಈಗ ಅಕ್ಷರಶಃ ಅರ್ಥವಾಯಿತು. ಮನೆಯಲ್ಲಿ ಮಾಡಿದ ಅಮ್ಮನ ಕೈ ಅಡುಗೆಗಿಂತ ಹೆಚ್ಚಾಗಿ ಯುವ ಪೀಳಿಗೆಗೆ ಪಾನಿಪುರಿ, ನಾನ್‌ವೆಜ್–ಕರಿದ ತಿಂಡಿಗಳು, ಮಕ್ಕಳಿಗೆ ಐಸ್‌ಕ್ರೀಂ, ಹಾಗೆಯೇ ಗಂಡಸರಿಗೆ ಹೊಟೇಲ್‌ನ ರುಚಿ ಬಹಳ ಹಿತವೆನಿಸಿದರೆ ಇದೀಗ ಅವೆಲ್ಲವನ್ನು ಸವಿಯುತ್ತಿದ್ದ ನಾಲಗೆಗೆ ಮನೆಯ ಅಡುಗೆಯೇ ಪ್ರಯೋಗ ಶಾಲೆಯಾಯಿತು. ಅಮ್ಮನ ಕೈ ರುಚಿಯೇ ಹಿತವೆನಿಸಿತು. ಬಿಡುವಿನ ಈ ಸಮಯದಲ್ಲಿ ಕೆಲವರ ಮನೆಯ ಅಂಗಳದಲ್ಲಿ, ತೋಟದಲ್ಲಿ ಅರಳಿದ ಹೂವುಗಳು, ಬೆಳೆದ ಹಸಿರು ತರಕಾರಿಗಳು ಮನಸ್ಸಿನ ಜೊತೆಗೆ ಹೊಟ್ಟೆಗೂ ಮುದ ನೀಡಿದವು.

ನಾನಾ ದುಶ್ಚಟಗಳಿಗೆ ಗೊತ್ತಿದ್ದೋ, ಗೊತ್ತಿಲ್ಲದೆಯೋ ಬಲಿಯಾಗಿ ಹಾಳಿನಂತ ಜೀವನಕ್ಕೆ ಹುಳಿ ಹಿಂಡಿದವರು ಈ 'ದಿಗ್ಬಂಧನ'ದ ಸಂದರ್ಭದಲ್ಲಿ ನಶೆಯ ಪದಾರ್ಥಗಳು ಸಿಗದೆ ಹತಾಶರಾಗಿ ತಾವೇ ಚುನಾಯಿಸಿದ ಸರ್ಕಾರದ ವಿರೋಧಿಗಳಾಗಿ, ಹಿಡಿಶಾಪ ಹಾಕುತ್ತಾ ನಿಧಾನವಾಗಿ ಬದುಕಿಗೆ ಎಲ್ಲವೂ ಅನಿವಾರ್ಯವಲ್ಲ ಎಂಬ ಸತ್ಯವನ್ನು ತಿಳಿದುಕೊಂಡರು. ಇನ್ನು ಕುಡಿಯದಿದ್ದರೆ ತನ್ನ ಮಗ, ಗಂಡ ಅಥವಾ ಅಪ್ಪನಿಗೆ ಏನಾದರೂ ಶುರುವಾಗಬಹುದು, ಹುಚ್ಚು ಹಿಡಿಯಬಹುದೆಂದು ಹೆದರುತ್ತಿದ್ದವರು ಇದೀಗ ಮನೆಯೊಳಗೆಯೇ ನಗುತ್ತಾ, ಹರಟೆ ಹೊಡೆಯುತ್ತಾ ಕುಡಿಯದೆಯೇ ಇರುವವರನ್ನು ಕಂಡು ಅಚ್ಚರಿಪಟ್ಟಿದ್ದಾರೆ.

ಆಧ್ಯಾತ್ಮಕ್ಕೆ ವಾಲಿದ್ದ ನಮ್ಮೆಲ್ಲರ ಬದುಕಿನ ದಿಕ್ಕನ್ನು ಇಂದಿನ ಸ್ಪರ್ಧಾತ್ಮಕ ಯುಗವು ಐಷಾರಾಮದತ್ತ ಮುಖ ಮಾಡಿಸಿದೆ. ಹಾಗಾಗಿ ಪ್ರತಿಕ್ಷಣವು ಮನಸ್ಸು ಕುರುಡು ಕಾಂಚಾಣದ ಸುತ್ತ ಜೋಗುಳ ಹಾಡುತ್ತಿದೆ. 'ಕಾಸಿದ್ದರೆ ಕೈಲಾಸ' ಎಂದು ನಂಬಿದವರಿಗೆ, ಜೀವನದಲ್ಲಿ ಕಾಸೊಂದಿದ್ದರೆ ಸಾಕೆಂಬ ತತ್ವಕಾರರಿಗೆ ಕಾಸಿದ್ದರೂ ಜೀವನಾವಶ್ಯಕ ವಸ್ತುಗಳು ಸಿಗದಿದ್ದಾಗ ಕಾಸೊಂದೇ ಜೀವನವಲ್ಲ ಎಂಬ ಸತ್ಯ ತಿಳಿಯಿತು. ದಿನಸಿ ಅಂಗಡಿಯ ಮುಂದಿರುವ ಸಾಲಿನಲ್ಲಿ ಬಡವನ ಬೆನ್ನ ಹಿಂದೆ ನಿಂತಿರುವ ಸಿರಿವಂತನ ಕಂಡು ಜಾತಿ, ಧರ್ಮ, ವರ್ಗದ ಯಾವುದೇ ಮೀಸಲಾತಿಗೂ ಈ 'ದಿಗ್ಬಂಧನ' ಅವಕಾಶ ನೀಡಲಿಲ್ಲ ಎಂದು ಅರ್ಥವಾಯಿತು.

ಅಕ್ಷರಶಃ ನಾವೀಗ ಬಂಧಿಗಳು. ಈ ಬಂಧನ ನಮ್ಮ ನಾಳೆಯ ಒಳ್ಳೆಯದಕ್ಕಾಗಿ ಎಂಬ ಸತ್ಯದ ಅರಿವು ನಮಗಿದೆ. ಈ 'ದಿಗ್ಬಂಧನ'ವು ನಮ್ಮಲ್ಲಿರುವ ಹಲವಾರು ಗ್ರಹಿಕೆಗಳನ್ನು ಒಡೆದು ಉನ್ನತ ಚಿಂತನೆಗಳ ಕಟ್ಟುವಿಕೆಯ ಪ್ರಕ್ರಿಯೆಗೆ ಕಾರಣವಾಯಿತೆನ್ನಬಹುದು. ಮನೆಯ ನಾಲ್ಕು ಗೋಡೆಯ ಮಧ್ಯೆಯೇ ಮಾತು, ಪ್ರೀತಿ, ಭಾವಗಳು ಮುಖಾಮುಖಿಯಾದವು. ಸಂಬಂಧದಲ್ಲಿರುವ ಸೂಕ್ಷ್ಮ ಎಳೆಗಳು ಕಣ್ಣ ಮುಂದೆ ಬಂದು ನಿಂತವು. ಪರರ ಕುರಿತಾಗಿ ಬೇರು ಬಿಟ್ಟಿದ್ದ ಸ್ವಯಂ ತೀರ್ಮಾನಗಳೆಲ್ಲವೂ ನಿಧಾನವಾಗಿ ಒಣಗಿ ಸುಕ್ಕುಗಟ್ಟಿದವು. ಜೀವನದ ಬಹುದೊಡ್ಡ ಸವಾಲು ನಮ್ಮ ಮುಂದೆ ನಿಂತಿದೆ. ಉತ್ತರಕ್ಕಾಗಿ ಬಹಳ ಸಂಯಮದಿಂದ ಕಾಯೋಣ.

**ಅರವಿಂದ ಬಿಜೈ**

# ನಿಜವಾದ ಗೆಳೆಯರು



ಒಬ್ಬ ವ್ಯಾಪಾರಿ ಇದ್ದನು. ಅವನ ಹತ್ತಿರ ಆವನು ಗಳಿಸಿದ್ದಲ್ಲದೆ ಹಿರಿಯರು ಗಳಿಸಿಟ್ಟ ಅಪಾರ ಸಂಪತ್ತು ಇತ್ತು. ಅವನು ತುಂಬಾ ಉದಾರಿಯಾಗಿದ್ದನು. ಆ ವ್ಯಾಪಾರಿ ಯಾವಾಗಲೂ ಅಸಹಾಯಕರಿಗೆ ಸಹಾಯ ಮಾಡುತ್ತಿದ್ದನು. ಆದರೆ ಔದಾರ್ಯದ ದುರುಪಯೋಗ ಮಾಡಿಕೊಳ್ಳುವವರೇ ಹೆಚ್ಚಾಗಿದ್ದರು. ಪ್ರತಿದಿನ ಅನೇಕ ಮಿತ್ರರು ಅವನ ಮನೆಗೆ ಬಂದು ಉಂಡು ತಿಂದು ಹೋಗುತ್ತಿದ್ದರು. ಹೋಗುವಾಗ ಅವನನ್ನು ಕೊಂಡಾಡಲು ಮರೆಯುತ್ತಿರಲಿಲ್ಲ. ಅವನನ್ನು ಸಂತೋಷಪಡಿಸಿ ತಮ್ಮ ಕೆಲಸವನ್ನು ಸಾಧಿಸಿಕೊಳ್ಳುತ್ತಿದ್ದರು. ಅವರಲ್ಲಿ ಅನೇಕರು ಸ್ವಾರ್ಥಿ ಹಾಗೂ ಆಸೆಬುರುಕರು ಇದ್ದರು.

ಆ ವ್ಯಾಪಾರಿಯು ಬಹಳ ಬುದ್ಧಿವಂತನೂ ಆಗಿದ್ದ. ಅವನು ತನ್ನ ಮಿತ್ರರ ನಿಜವಾದ ಸ್ವರೂಪ ತಿಳಿಯಲು ಕಾತರನಾಗಿದ್ದ. ಅಂತೆಯೇ ಒಂದು ದಿನ ಅವರನ್ನು ಪರೀಕ್ಷಿಸುವ ನಿಶ್ಚಯ ಮಾಡಿದ. ದಿನವೂ ತನ್ನ ಬಳಿ ಬರುವ ಆ ಎಲ್ಲ ಮಿತ್ರರನ್ನೂ ಭೋಜನಕೂಟಕ್ಕೆ ಆಮಂತ್ರಿಸಿದನು. ನಿತ್ಯದಂತೆ ಈ ದಿನವೂ ತೃಪ್ತಿಯಾಗುವಂತೆ ಕಂಡು ಅವನ ಗುಣಗಾನ ಮಾಡತೊಡಗಿದರು.

ಸಮಯ ಸಾಧಿಸಿ ವ್ಯಾಪಾರಿ ಹೇಳಿದ 'ಮಿತ್ರರೇ, ನಿಮಗೊಂದು ಮಾತು ಹೇಳಬೇಕಾಗಿದೆ. ಇಂದು ರಾತ್ರಿ ಕೆಲವು ದರೋಡೆಕೋರರು ನನ್ನ ಮನೆಯ ಮೇಲೆ ದಾಳಿ ಮಾಡಿ ನನ್ನನ್ನು ಕೊಂದು ನನ್ನ ಸಂಪತ್ತನ್ನು ಅಪಹರಿಸಬೇಕೆಂದು ಹೊಂಚು ಹಾಕಿದ್ದಾರೆಂದು ನನಗೆ ತಿಳಿದುಬಂದಿದೆ'. ವ್ಯಾಪಾರಿಯ ಮಾತುಗಳನ್ನು ಕೇಳುತ್ತಿದ್ದಂತೆ ಎಲ್ಲ ಮಿತ್ರರಿಗೆ ಆಶ್ಚರ್ಯವೂ, ಭಯವೂ ಆಯಿತು. ಬೆದರಿದ ಜಿಂಕೆಯಂತೆ ಅವರು ಪರಸ್ಪರ ಮುಖ ನೋಡತೊಡಗಿದರು. ಎಲ್ಲರ ಮುಖದ ಮೇಲೆ ಪ್ರಶ್ನೆಯ ಚಿಹ್ನೆ ಮೂಡಿತು.

ವ್ಯಾಪಾರಿ ಮುಂದೆ ಹೇಳತೊಡಗಿದ, 'ಬಂಧುಗಳೇ, ನೀವೆಲ್ಲ ನನ್ನವರು. ಈ ಸನ್ನಿವೇಶದಲ್ಲಿ ನನ್ನ ಹಾಗೂ ನನ್ನ ಸಂಪತ್ತಿನ ರಕ್ಷಣೆಯ ಭಾರ ನಿಮ್ಮದು. ನೀವೆಲ್ಲರೂ ಜವಾಬ್ದಾರಿಯನ್ನು ನಿರ್ವಹಿಸುವಿರೆಂದು ನಾನು ನಂಬಿದ್ದೇನೆ. ಇಂದು ರಾತ್ರಿ ನೀವೆಲ್ಲ ಇಲ್ಲಿಗೆ ಬನ್ನಿ. ನಾವೆಲ್ಲರೂ ಒಟ್ಟಿಗೆ ಸೇರಿ ಆ ದರೋಡೆಕೋರರನ್ನು ಹಿಡಿಯೋಣ. ಈ ಮಾತನ್ನು ಕೇಳಿ, 'ಅವಶ್ಯವಾಗಿ ಬರುತ್ತವೆ. ನಿಮ್ಮ ಹಾಗೂ ನಿಮ್ಮ ಸಂಪತ್ತಿನ ರಕ್ಷಣೆ ಮಾಡುತ್ತೇವೆ' ಎಂದರು ಎಲ್ಲಾ ವ್ಯಾಪಾರಿಗಳು.

ರಾತ್ರಿಯಾಯಿತು. ಆದರೆ ನೂರಾರು ಮಿತ್ರರಲ್ಲಿ ಕೇವಲ ಇಬ್ಬರು ವ್ಯಾಪಾರಿಗಳು ರಕ್ಷಣೆಗೆ ಬಂದಿದ್ದರು. ಇದರಿಂದ ಈ ವ್ಯಾಪಾರಿ ಒಂದು ನಿರ್ಣಯಕ್ಕೆ ಬಂದ. ಇಷ್ಟು ಮಿತ್ರರಲ್ಲಿ ಇವರಿಬ್ಬರೇ ನಿಜವಾದ ಮಿತ್ರರು. ಉಳಿದವರು ಸ್ವಾರ್ಥಿಗಳು ಹಾಗೂ ಸಮಯ ಸಾಧಕರು ಎಂಬ ವಿಚಾರ ವ್ಯಾಪಾರಿಗೆ ಮನದಟ್ಟಾಯಿತು. ಗೆಳೆತನದ ಪರೀಕ್ಷೆ ನಿಜವಾಗಿ ಸಂಕಟ ಸಮಯದಲ್ಲಿ ಆಗುತ್ತದೆ ಎಂದು ತಿಳಿದುಕೊಂಡಿದ್ದ ಆ ಜಾಣ ವ್ಯಾಪಾರಿ.

ಇದರಿಂದ ತಿಳಿದ ನೀತಿ ಗೊತ್ತೇ ಮಕ್ಕಳೇ, 'ನೂರಾರು ಉಪಯೋಗಕ್ಕೆ ಬರಲಾರದ ಮಿತ್ರರು ಇರುವುದಕ್ಕಿಂತ ಕಷ್ಟಕಾಲದಲ್ಲಿ ಸಹಾಯ ಮಾಡುವ ಇಬ್ಬರು ಮಿತ್ರರು ಇರುವುದು ಉತ್ತಮ'.

***ಚಂದ್ರಶೇಖರ ಜೋಳದರಾಶಿ***



# ಜೀವನ

ಮಗುವಾಗಿ ಹುಟ್ಟಿ ಮುದುಕನಾಗಿ ಸಾಯುವತನಕ
ಅದೇನೆಲ್ಲಾ ಆಟ-ಓಟ, ಕಲಿಕೆ-ಹುಡುಕಾಟ
ಹೋರಾಟ-ಹೊಡೆದಾಟ ಅಣ್ಣ-ತಮ್ಮರೊಡನೆ
ಅಕ್ಕ-ತಂಗಿಯರ ಜೊತೆ, ಅಮ್ಮ-ಅಪ್ಪನ ಕೂಡೆ
ನೆರೆಮನೆಯವರ ಸಂಗಡ, ಸ್ನೇಹಿತರ ಮಧ್ಯೆ
ಮಳಲ ಗುಡಿಸಲು ಕಟ್ಟಿ ಒಡೆದಾಗ, ಮಳೆಯ
ನೀರಿನಲಿ ದೋಣಿ ತೇಲಿಬಿಟ್ಟು ಮುಳುಗಿದಕ್ಕೆ
ಅಮ್ಮ ಕೊಟ್ಟ ತಿಂಡಿ ಅಣ್ಣನಿಗಿಂತ ಕಡಿಮೆ ಅನಿಸಿದಾಗ
ಅವನ ಚಾಕ್ಲೆಟ್ ದೊಡ್ಡದೆನಿಸಿದಾಗ ಅಕ್ಕನ ಹೊಸ
ಲಂಗ ನನಗೆ ಅಪ್ಪ ತಂದ ಅಂಗಿಗಿಂತ ಚಂದ
ವೆನಿಸಿದಾಗ ಶಾಲೆಯಲ್ಲಿ ಸ್ನೇಹಿತ ನನಗಿಂತ ಹೆಚ್ಚು
ಅಂಕ ಗಳಿಸಿದಾಗ, ಆಟೋಟದಲಿ ನಾನು ಅಣ್ಣ
ನಿಗಿಂತ ಹಿಂದಾದಾಗ ಪರೀಕ್ಷೆಯಲ್ಲಿ ಅವಳು
ನನಗಿಂತ ಹೆಚ್ಚು ಮಾರ್ಕ್ ಗಳಿಸಿದಾಗ ಹೀಗೆ
ಒಂದಲ್ಲಾ ಒಂದು ನೆಪದಲ್ಲಿ ಜಗಳವಾಡಿ ದುಃಖ
ಪಡುವುದೇ ಜೀವನವಾದರೆ
ಮುಂದೊಂದು
ದಿನ ದೊಡ್ಡವನಾಗಿ ವಿದ್ಯೆ ಮುಗಿಸಿ ಕೆಲಸ
ಪಡೆದು ಮದುವೆಯಾಗಿ ಮಕ್ಕಳಾಗಿ ಊರಿನ
ಹತ್ತು ಜನ ಜವಾಬ್ದಾರಿಯುತ ಮನುಷ್ಯರಲ್ಲಿ
ಒಬ್ಬನಾಗಿ ಬೆಳೆದು ನಿಂತಾಗ ಹಿಂತಿರುಗಿ ನೋಡಿದರೆ
ಅದೇಕೋ ನಾಚಿಕೆ, ಬೇಸರ ವಾಕರಿಕೆ ಬರುವಂತಹ
ಮನೋಭಾವ ಅದೆಷ್ಟು ಸಣ್ಣತನ, ಅಸೂಯೆ
ಸ್ವಾರ್ಥದಿಂದ ಕೂಡಿತ್ತು ನನ್ನ ಬಾಲ್ಯ, ಯವ್ವನ
ಅನ್ನಿಸುವಷ್ಟರಲ್ಲೆ ಮಕ್ಕಳು ದೊಡ್ಡವರಾಗಿ
ನಾವು ಮುದುಕರಾಗಿ ಇನ್ನೇನು ನಮ್ಮ ದಿನ
ಮುಗಿದೇ ಹೋಗುತ್ತಿದೆ ಎನ್ನಿಸುವಂತಾಗುತ್ತಿದೆ
ಹಳೆಯ ಬಾಲ್ಯದ ಗೆಳೆಯರು, ನೆರೆಮನೆಯ
ಆಪ್ತರು, ಹೋಗಲಿ ಮಕ್ಕಳು-ಮೊಮ್ಮಕ್ಕಳು
ಕೂಡಾ ಒಂದಿಷ್ಟು ಸಮಯ ನೀಡದೆ
ಎಲ್ಲರೂ ಅವರವರ ಸಂಘರ್ಷ, ಜಗಳ
ಹೋರಾಟದಲ್ಲಿ ಮಗ್ನರಾಗಿರುವುದ ಕಂಡು
ಮುಗುಳು ನಗುವುದೋ ಅಳುವುದೋ
ಏನೊಂದೂ ತಿಳಿಯಲಾರದ ಅರ್ಥಹೀನ ಸ್ಥಿತಿಯಾಗಿದೆ.

***ಸಖಾರಾಮ ಉಪ್ಪೂರು***

# ಅಂತರ್ಜಾಲದಲ್ಲಿ 'ವರ್ಷಗಾನ'




ಇಡೀ ಜಗತ್ತೇ "ಕೊರೋನಾ" ಎಂಬ ಅದೃಶ್ಯ ಶತ್ರು ಮಹಾಮಾರಿಯ ವಿರುದ್ಧ ಹೋರಾಡುತ್ತಿರುವ ಈ ಸಂದರ್ಭದಲ್ಲ, ನಾವೆಲ್ಲ ಗೃಹಬಂಧನದಲ್ಲಿದ್ದಂತೆ ಭಾಸವಾಗುತ್ತಿದೆ. ಸಾರ್ವಜನಿಕವಾಗಿ ಯಾವುದೇ ಸಭೆ ಸಮಾರಂಭಗಳಲ್ಲಿ ಸೇರಲಾಗದ ಕಾರಣ, ನಮ್ಮ "ಗಾನಗಂಧರ್ವ" ತಂಡ, ನವದೆಹಲಿಯಿಂದ ಝೂಮ್ ಎಂಬ ಅಪ್ಲಿಕೇಶನ್ ಮೂಲಕ ಅಂತರ್ಜಾಲದ ಸಹಾಯದಿಂದ ಒಂದು ಸಂಗೀತ ಕಾರ್ಯಕ್ರಮ ನಡೆಸಬೇಕೆಂದು ನಿರ್ಧರಿಸಿತ್ತು. ದೆಹಲಿಯ ಬಿಸಿಲಿಗೆ ಬೇಸತ್ತು ಮುಂಗಾರು ಮಳೆಯನ್ನು ಆಹ್ವಾನಿಸಲು "ವರ್ಷಗಾನ" ಎಂಬ ಮಳೆ ಕುರಿತ ಹಾಡುಗಳ ಸಂಗೀತ ಕಾರ್ಯಕ್ರಮದ ವಿನೂತನ ಪ್ರಯೋಗ  ಮೇ 31 ರ ಭಾನುವಾರ ಬೆಳಗ್ಗೆ 11:30 ರಿಂದ ಅಪರಾಹ್ನ 1:00 ಗಂಟೆಯ ವರೆಗೆ ಏರ್ಪಡಿಸಿತು.

ತಂಡದ ಕಲಾವಿದರಾಗಿ ದೆಹಲಿಯಿಂದ ಶ್ರೀಮತಿ ಪೂಜಾ ಪಿ. ರಾವ್, ಕುಮಾರಿ ಪೂರ್ಣಿಮಾ ಅಡಿಗ, ಆರ್. ಗಂಗಾಧರ್,  ಅರವಿಂದ ಬಿಜ್ಜೈ, ಶ್ರೀಮತಿ ನಿವೇದಿತಾ ಶರ್ಮ, ಶ್ರೀಮತಿ ಜಯಶ್ರೀ



ಟಿ.ಎಸ್. ರಮೇಶ್

ಬಸವರಾಜ್, ಹರಿಯಾಣ ಗುರುಗ್ರಾಮದಿಂದ ಚಿದಂಬರ ಕೋಟೆ, ಮಧ್ಯಪ್ರದೇಶದ ಮಾಹುವಿನಿಂದ ಶ್ರೀಮತಿ ಮಮತಾ ಪ್ರವೀಣ್, ಮಹಾರಾಷ್ಟ್ರದ ಪುಣೆಯಿಂದ ಯುವ ಗಾಯಕ ಶ್ರೇಯಸ್ ಎಸ್. ಜೋಗಿ, ಕರ್ನಾಟಕ ಬೆಂಗಳೂರಿನಿಂದ ಶ್ರೀ ಟಿ.ಎಸ್. ರಮೇಶ್ ಹಾಗೂ ತಮಿಳುನಾಡು ಚೆನ್ನೈಯಿಂದ ಗಿಟಾರಿಸ್ಟ್ ಜಿತೇಶ್ ಹೀಗೆ ಎಲ್ಲರೂ ಸುಶ್ರಾವ್ಯವಾಗಿ ಹಾಡಿ ಜನರನ್ನು ಮನರಂಜಿಸಿ ನಮ್ಮ ಮೊದಲ ಪ್ರಾಯೋಗಿಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದಾರೆ. ಎಲ್ಲಾ ಕಲಾವಿದರು ಮಳೆಯ ಕುರಿತು ಚಿತ್ರಗೀತೆಗಳನ್ನು ಹಾಡಿದರೆ, ಟಿ.ಎಸ್. ರಮೇಶ್‌ರವರು ಕನ್ನಡದ ಜನಪ್ರಿಯ ಕವಿ ಚೆನ್ನವೀರ ಕಣವಿಯವರ ಮಳೆ ಕುರಿತ ಕವನ ವಾಚನವನ್ನು ಮಾಡಿದರು ಹಾಗೂ ಅರವಿಂದ್ ಬಿಜ್ಜೈಯವರು ಸ್ವತಃ ಕವಿಗಳು ಹಾಗೂ ಬರಹಗಾರರು ಕೂಡಾ. ಅವರು ಕಾರ್ಯಕ್ರಮದಲ್ಲಿ ಸ್ವರಚಿತ ಕವನವೊಂದಕ್ಕೆ ರಾಗ ಸಂಯೋಜನೆ ಮಾಡಿ, ತಮ್ಮ ಶ್ರೀಮತಿಯವರೊಂದಿಗೆ ಹಾಡಿ, ಪ್ರೇಕ್ಷಕರ ಪ್ರಶಂಸೆಗೆ ಪಾತ್ರರಾದರು.

ಕಾರ್ಯಕ್ರಮದ ಮತ್ತೊಂದು ವಿಶೇಷವೆಂದರೆ ಕುಮಾರಿ ಸಪ್ನ ಅತ್ತಾವರ್ ಅವರಿಂದ "ತಾಲ್" ಚಿತ್ರದ "ತಾಲ್ ಸೆ ತಾಲ್ ಮಿಲಾ" ಥೀಮ್ ಹಾಡಿಗೆ ಅದ್ಭುತವಾಗಿ ನೃತ್ಯ ಪ್ರಸ್ತುತಪಡಿಸಿದರು. ಇವರು ಅಂತರರಾಜ್ಯ ಹಾಗೂ ಅಂತರರಾಷ್ಟ್ರೀಯ ಭರತನಾಟ್ಯ ಕಲಾವಿದೆ.  ಇವರು ತಮ್ಮ ವಿಶೇಷ ನೃತ್ಯ ಪ್ರದರ್ಶನದಿಂದ ಪ್ರೇಕ್ಷಕರ ಮನಸ್ಸನ್ನು ಸೂರೆಗೊಂಡಿದ್ದಾರೆ.

ಕಾರ್ಯಕ್ರಮದ ಆಯೋಜನೆ ದೆಹಲಿಯಿಂದಲೇ ಆಗಿದ್ದರೂ ಕೂಡಾ, ತಂಡದ ಹಲವು ಕಲಾವಿದರು ಕಾರ್ಯನಿಮಿತ್ತ ಬೇರೆ ಬೇರೆ ರಾಜ್ಯಗಳಲ್ಲಿ ವಾಸಿಸುತ್ತಿದ್ದಾರೆ. ಮತ್ತೊಮ್ಮೆ ನಾವೆಲ್ಲರೂ ಒಟ್ಟಾಗಿ ಆರು ಬೇರೆ ಬೇರೆ ರಾಜ್ಯಗಳಿಂದ ಈ ಒಂದು ಸಂಗೀತ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿರುವುದು ನಿಜಕ್ಕೂ ಒಂದು ವಿಶೇಷ ಪ್ರಯತ್ನ.

ಕಾರ್ಯಕ್ರಮದ ಸಂಪೂರ್ಣ ರೂವಾರಿ, ಹಾಗೂ ಎಲ್ಲ ತಾಂತ್ರಿಕ ನಿರ್ವಹಣೆ ಜವಾಬ್ದಾರಿಯನ್ನು ಹೊತ್ತವರು ನಮ್ಮೆಲ್ಲರ ಪರಿಚಿತರಾದ ದೆಹಲಿಯ ಸಂಗೀತ ಹಾಗೂ ರಂಗ ಕಲಾವಿದ ಟಿ.ಎಸ್. ರಮೇಶ್‌ರವರು. ಅವರ ಮಾರ್ಗದರ್ಶನದಿಂದ ಎಲ್ಲಾ ಕಲಾವಿದರು ಬೇಕಾದ ತಾಂತ್ರಿಕ ವ್ಯವಸ್ಥೆಗಳನ್ನು ತಮ್ಮ ತಮ್ಮ ಮನೆಗಳಲ್ಲಿಯೇ ಮಾಡಿಕೊಂಡು ಅತಿ ಕಡಿಮೆ ಸಮಯದಲ್ಲಿ ಅಭ್ಯಾಸ ಮಾಡಿ ಕಾರ್ಯಕ್ರಮದ ಯಶಸ್ವಿಗೆ ಕಾರಣರಾಗಿದ್ದಾರೆ.

ಈ ಕಾರ್ಯಕ್ರಮಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಶ್ರಮಿಸಿದ ಎಲ್ಲಾ ಮಹನೀಯರಿಗೆ, ಕಾರ್ಯಕ್ರಮವನ್ನು ವೀಕ್ಷಿಸಿದ ಎಲ್ಲ ಪ್ರೇಕ್ಷಕ ಬಂಧುಗಳಿಗೆ ಹಾಗೂ ಪರರಾಜ್ಯದಲ್ಲಿದ್ದರೂ ಕನ್ನಡದ ಕಂಪನ್ನು ಪಸರಿಸಿದ ತಂಡದ ಎಲ್ಲ ಕಲಾವಿದರಿಗೆ ಮತ್ತೊಮ್ಮೆ ಧನ್ಯವಾದಗಳನ್ನು ತಿಳಿಸುತ್ತಾ, ಆದಷ್ಟು ಬೇಗ ಮತ್ತೊಂದು ಕಾರ್ಯಕ್ರಮದೊಂದಿಗೆ ನಿಮ್ಮ ಮುಂದೆ ಶೀಘ್ರದಲ್ಲಿಯೇ ಬರಲಿದ್ದೇವೆ.

***ಚಿದಂಬರ ಕೋಟೆ***

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ನೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ.
ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು-ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING
Office :
C-95, Okhla Industrial Area
Phase-I, New Delhi – 110 020

Ph : 40520770
M : 9811104398, 9811604398

Delhi Karnataka Sangha Abhimata
June-2020, Vol. No.30, Issue No. 9, Price Rs.1/-
RNI Regn. No. 53405/91, DL-SW-1/4016/19-21
Date of Publication : June 8th / 9th, Posting Date :10th / 11th, Total Pages-16, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y

# ‘ಹಸಿರೇ ಉಸಿರು’
# ಸಂಘದ ಮುಂಭಾಗದ ಉದ್ಯಾನವನ

